
ಅಪರಂಜಿ


ಸೆಪ್ಟೆಂಬರ್ 99

ತಿಳಿನಗೆಯ ಕಾರಂಜಿ



ಪ್ರಕಾಶ್
ಶಿವು
ಕೃಷ್ಣ ಸುಬ್ಬರಾವ್
ಹಾ. ರಾ.
ಚಂಚಲಾ ಶ್ರೀಕಂಠಯ್ಯ
ಎಚ್. ಗೋಪಾಲಕೃಷ್ಣ
ನಾಗೂಶ್ರೀ ಸೂರಿ
ಕುಮುದಾ ಪುರುಷೋತ್ತಮ್
ಬಿ. ಆರ್. ನಾಗೇಶ್
ವಿಜಯರಾಜ ಸುತಾ

ಬಿಡಿ ಪ್ರತಿ: ರೂ. 5.00



ಕೊರವಂಜಿಗೆ ಲಕ್ಷ್ಮಣ್ ಬರೆದ ವ್ಯಂಗ ಚಿತ್ರ

ಶುಭಾಶಗಳೊಂದಿಗೆ

ವಿಜಯಾ ಮತ್ತು ಆನಂದ್ ದೇಸಾಯ್

ಆಸ್ಟಿನ್, ಟೆಕ್ಸಸ್



ಗೌರವ ಸಲಹೆಗಾರರು:
ಶ್ರೀ ಅ. ರಾ. ಸೇ.
ಶ್ರೀ ಶೇಷಗಿರಿ
ಸಂಪಾದಕ:
ಶಿವಕುಮಾರ್
ನಿರ್ವಹಣೆ:
ಬೇಲೂರು ರಾಮಮೂರ್ತಿ
ಕೃಷ್ಣ ಸುಬ್ಬರಾವ್

ಚಂದಾ ವಿವರ:
ಬಿಡಿ ಪ್ರತಿ: ರೂ. 5.00
ವಾರ್ಷಿಕ ಚಂದಾ: ರೂ. 60
ಹತ್ತು ವರ್ಷದ ಚಂದಾ : ರೂ. 500

ವಿಳಾಸ : ಅಪರಂಜಿ ಕಾರ್ಯಾಲಯ, 36, 6ನೇ ಮುಖ್ಯ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560 003 (ಕೆಲಸದ ವೇಳೆ: ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ)

ಈ ಸಂಚಿಕೆಯಲ್ಲಿ

ಸಂಪುಟ 16 ಸೆಪ್ಟೆಂಬರ್- 99 ಸಂಚಿಕೆ- 12

ಮುದ್ರಣ: ಇಂಪ್ರೆಶನ್ಸ್, ಬೆಂಗಳೂರು - 3 ಅಕ್ಷರ ಜೋಡಣೆ: ಒಮೇಗಾ ಲೇಸರ್‌ಟೆಕ್, ಬೆಂಗಳೂರು 27



ಅಪರಂಜಿ

(ತಿಳಿನಗೆಯ ಕಾರಂಜಿ)

ಸಂಪುಟ 16 ಸೆಪ್ಟೆಂಬರ್- 99 ಸಂಚಿಕೆ - 12

ಹೇ ಪಾಪರಹಿತನೆ ನನಗೆ ಎರಡು ರೂಪಗಳು: ಸಾಮಾನ್ಯವು ಒಂದು. ಇನ್ನೊಂದು ಪರ.

- *ಯೋಗವಾಸಿಷ್ಠ*

ಎಲೈ ಮೂಲತಃ ಪಾಪರಹಿತನಾದ ಶ್ರೀ ಸಾಮಾನ್ಯನೇ, ನಾನೂ ನಿನ್ನಂತೆ ಪಾಪರಹಿತನಾಗಿದ್ದೆ. ಅದು ನನ್ನ ಸಾಮಾನ್ಯ ರೂಪ. ನಿನ್ನನ್ನು ಮೋಸಗೊಳಿಸಿ ಪಾಪಿಯೆಂದು ಆತ್ಮನಿಂದೆ ಮಾಡಿಕೊಳ್ಳುತ್ತಾ ಅಳುವಂತೆ ಮಾಡಿದುದು ನನ್ನ ಹೆಚ್ಚಿನ (ಪರ) ಇನ್ನೊಂದು ರೂಪ.

ನಾವೆಲ್ಲರೂ ಒಂದು. ಪರಕೀಯರನ್ನು ಓಡಿಸಿದರೆ ಹಾಲು ಹರಿಯುವ ಜೇನು ಸುರಿಯುವ ಸ್ವರ್ಗ ಭೂಮಿಗಿಳಿಯುತ್ತದೆ ಎಂದು ಹೇಳಿ, ಮುಂದೆ ನಿಮ್ಮನ್ನು ಕಳಿಸಿ, ಲಾಠಿ, ಗುಂಡು, ನೇಣುಗಂಬಗಳಿಗೆ ಬಲಿಗೊಟ್ಟು, ನಾನು ಪರಕೀಯರತ್ತ ಒಂದುಕಾಲು, ನಿಮ್ಮತ್ತ ಒಂದು ಕಾಲು ಇಟ್ಟುಕೊಂಡು ಅಧಿಕಾರಕ್ಕೇರಿದೆ. ನೀವು ಒಂದಾಗಿದ್ದವರನ್ನು, ಹಣ, ಹೆಂಡ, ಜಾತಿ, ಉಪಜಾತಿ, ಇತ್ಯಾದಿಗಳ ಹೆಸರಿನಲ್ಲಿ ಛಿದ್ರಗೊಳಿಸಿ, ಪಂಚಾಯ್ತಿಹೇಳಿ ನಿಮಗೆಲ್ಲರಿಗೂ ಹೆಚ್ಚಿನವನಾಗಿ ಮಜ ಸ್ವರ್ಗದಲ್ಲಿದ್ದೇನೆ. ಸ್ಥಿರತೆಯ ಹೆಸರಲ್ಲಿ ಮತಗಳಿಸಿ ನಮ್ಮ ಪಕ್ಷವನ್ನು ದೇಶವನ್ನು, ಒಡೆದು ಎರಡು ಚೂರು ಮಾಡಿದ್ದಲ್ಲದೆ, ಸರ್ಕಾರಗಳನ್ನು ಬದಲಿಸಿ ಉರುಳಿಸಿ, ಅಧಿಕಾರವನ್ನು ಕಳೆದುಕೊಂಡು, ಗಳಿಸಿ, ಕಳೆದುಕೊಂಡು ದುಂಡಗಾಗಿದ್ದೇನೆ. ಈಗ ನಮ್ಮನ್ನು ಒಂದುಗೂಡಿಸಲು ವಿದೇಶೀ ಮೂಲಗಳನ್ನು ನಾನು ಕಡೆಗಣಿಸಿಲ್ಲ. ನಿಮ್ಮ ಮತ ಯಾರಿಗೆ? ನನಗಲ್ಲದೆ ಮತ್ತಾರಿಗೆ ಎಂದು ಯಾರು ಯಾರಿಗೆ ಯಾವಾಗ ಹೇಳಿದರು ಎಂಬುದನ್ನು ತಿಳಿದರೂ ಫೇಲು, ತಿಳಿಯದಿದ್ದರೂ ಫೇಲು.

ಆದರೆ ಅದು ನಿಜವಾಗಿಯೂ ಯೋಗವಾಸಿಷ್ಠದ ಅಭಿಪ್ರಾಯವಲ್ಲ, ಅದರ ಅಭಿಪ್ರಾಯವೇನೆಂದರೆ:

ಮನುಷ್ಯ ದೇಹದಂತೆ ಮೂರ್ತಿಯಾಗಿ ಅರ್ಜಿಸಿಕೊಳ್ಳುವುದು ಸಾಮಾನ್ಯರೂಪ. ಆದಿಯೂ, ಅಂತ್ಯವೂ ಇಲ್ಲದ ನಿರ್ಮಲವಾದ, ನಿತ್ಯಶುದ್ಧ ಬುದ್ಧ ಮುಕ್ತವಾದ ಆತ್ಮ, ಬ್ರಹ್ಮ, ಪರಮಾತ್ಮ ಎಂದು ಕರೆಸಿಕೊಳ್ಳುವುದು ಪರ ಎಂದರೆ ಹೆಚ್ಚಿನ ರೂಪ.



○ ಪ್ರಕಾಶ್

ದಳ ಚಿಹ್ನೆ ವಿವಾದ; ಲಿಖಿತ ದಾಖಲೆಗೆ ಕಾಲಾವಕಾಶ

- ಸುದ್ದಿ

ಎರಡು ಪಕ್ಷದವರಿಗೂ ಅರ್ಧ ಚಕ್ರ ಕೊಟ್ಟರೆ ಆಯಿತು!!

★★★★

ಮೌಲ್ಯಾಧಾರಿತ ರಾಜಕೀಯ; ಯುವಕರಿಗೆ ಸೋನಿಯಾ ಕರೆ

- ಪತ್ರಿಕೆ

ಹೌದು ವೃದ್ಧರನ್ನು ನಂಬುವಹಾಗಿಲ್ಲ!!

★★★

ಚುನಾವಣೆ ಮುಗಿಯುವವರೆಗೆ ದೇವನಹಳ್ಳಿ ವಿಮಾನ ನಿಲ್ದಾಣದ ಬಗ್ಗೆ ನಿರ್ಣಯ ಕೂಡದು

- ಚುನಾವಣಾ ಆಯೋಗ

ಈ ಬಗ್ಗೆ ಗಾಬರಿ ಪಡಬೇಕಾಗಿಲ್ಲ!!

★★★

ಸಚಿನ್‌ಗೆ ಮತ್ತೆ ನಾಯಕನ ಪಟ್ಟ

- ಕ್ರೀಡಾಸುದ್ದಿ

ಬಲವಂತ ಮಾಘಸ್ನಾನ!!

★★★

ಪಾಕ್ ಜತೆ ಸಂಬಂಧ; ಸರ್ಕಾರಕ್ಕೆ ಬಿಟ್ಟಿದ್ದು

- ಸುದ್ದಿ

ಹೆದರಬೇಡಿ, ಕ್ರೀಡಾ ಪುಟದ ಸುದ್ದಿ ಇದು!!

★★★

ಕಾಂಗ್ರೆಸ್ ಅಭ್ಯರ್ಥಿಗಳ ಆಯ್ಕೆಗೆ ಭಾರೀ ಕಸರತ್ತು
- ಪತ್ರಿಕೆ

ಇದೇನು ಕಷ್ಟ? ಸತ್ಯಸಂಧರನ್ನೆಲ್ಲ ನಿಲ್ಲಿಸಿದರೆ ಆಯಿತು!!

☆☆☆

ವೈಯಕ್ತಿಕ ಸತ್ಯ ಹೇಳುವುದು ಸುಲಭವಲ್ಲ
- ಹೇಳಿಕೆ

ಅದೇ ನಮ್ಮ ಅನುಭವ ಸಹ!!

☆☆☆

ಚುನಾವಣೆ; ವೀರಪ್ಪನ್ ವಿರುದ್ಧ ಕಟ್ಟೆಚ್ಚರ
-ಸುದ್ದಿ

ಅಂದರೆ ಅವನೂ ನಿಲ್ಲುತ್ತಾನೆ ಅಂತಲೋ??

☆☆☆

ಸೋರುತ್ತಿರುವ ಸರ್ಕಾರಿ ಕಚೇರಿಗಳು
-ಪತ್ರಿಕೆ

ಅರ್ಥವಾಯಿತು!!

☆☆☆



''ಸೋನಿಯಾಗಾಂಧಿ ನಿನಗಿಂತ ಚೆಲುವೆ ಅಂತ ನಾನು ಯಾವಾಗ ಹೇಳ್ದೇ?''

ನಮ್ಮ ನಿಮ್ಮಲ್ಲಿ

ಈ ಅಂಕಣ ಬರೆಯಲು ಕುಳಿತಿರುವಂತೆಯೇ ಮನೆ ಮುಂದಿನ ಬೀದಿಯಲ್ಲಿ ಒಂದು ಎಲೆಕ್ಷನ್ ಆಟೋ ಕರ್ಣಕಠೋರವಾದ ಕರ್ಕಶದನಿಯಲ್ಲಿ ''ಮತ ಬಾಂಧವರೇ (?) ಹರಿಪ್ರಸಾದರಿಗೇ ನಿಮ್ಮ ಘನವಾದ ಓಟು ಕೊಡಲು ಮರೆಯದಿರಿ. ಮರೆತು ನಿರಾಶರಾಗದಿರಿ'' ಎಂದು ಕೂಗುತ್ತಾ ಓಡಿ ಹೋಯಿತು. ಹರಿಪ್ರಸಾದರ ಮತ ಬಾಂಧವರಿಗೆ ನಿರಾಶೆ ಏಕೆ? ಎಂಬ ಪ್ರಶ್ನೆ ಸುಮಾರು ಹೊತ್ತು ನನ್ನನ್ನು ಕಾಡಿತು. ಏನೋ ಅತಿಯಾದ ಡಿಸ್ಕೌಂಟ್ ಮಾರಾಟ ಇದ್ದು, ಆಸೆಪಟ್ಟು ಕೊಳ್ಳಲು ಹೋದಾಗ ಸರಕೆಲ್ಲಾ ಬರಿದಾಗಿದ್ದರೆ ನಿರಾಶೆಯಾಗುವುದು ಸಹಜ. ಆದರೆ ಮತದಾನ ಮಾಡಲಾಗದಿದ್ದುದಕ್ಕಾಗಿ ನಿರಾಶೆ? ನನ್ನ ಚಿದಾಕಾಶದಲ್ಲಿ ಸೆಪ್ಟೆಂಬರ್ ಆರನೇ ತಾರೀಖಿನ ದೃಶ್ಯವೊಂದು ಸುಳಿದು ಹೋಯಿತು.

ಪಾರ್ವತಿ: ಗೌರೀ, ಯಾಕೋ ಬೆಳಗ್ಗೆಯಿಂದ ತೀರಾ ಬೇಜಾರಾಗಿ ಹೋಗಿದೆ ಕಣೇ

ಗೌರಿ: ಯಾಕೇ ಪಾರ್ವತಿ, ಅಂಥಾದ್ದೇನಾಯ್ತೂ?

ಪಾ: ಅನಾಹುತ ಕಣೇ, ನಿಜವಾದ ಅನಾಹುತ!

ಗೌ: ಅಯ್ಯೋರಾಮಾ, ಏನೇ ಅದು ಅನಾಹುತ?

ಪಾ: ನಿನ್ನೆ ಯಾವ ತಾರೀಖು ಹೇಳು?

ಗೌ: ಐದು

ಪಾ: ಐದನೇ ತಾರೀಖು ಚುನಾವಣೆ ಇದೆ ಅನ್ನೋದನ್ನೇ ಮರೆತುಬಿಟ್ಟಿದ್ದೆ ಕಣೇ ಗೌರಿ, ಹರಿಪ್ರಸಾದರಿಗೆ ನನ್ನ ಓಟು ಹಾಕಬೇಕು ಅಂತ ಎಷ್ಟು ಆಸೆ ಇಟ್ಕೊಂಡಿದ್ದೆ ಗೊತ್ತಾ. ಥೂ ಹಾಳು ಮರೆವು! ನನ್ನ ಆಶೆ ಎಲ್ಲಾ ಭಗ್ನ ಆಗಿಹೋಯ್ತು. ಈಗ ನನ್ನ ಬಾಳಿನಲ್ಲಿ ಅಂಧಕಾರ ಬಿಟ್ರೆ ಇನ್ನೇನೂ ಇಲ್ಲ....

ಆ ಎಲೆಕ್ಷನ್ ಆಟೋದೋನು ಹಾಗೆ ಮಾಡಿದ್ರೆ, ನನಗೆ ನಿನ್ನೆ ಸಿಕ್ಕಿದ್ದ ಇನ್ನೊಬ್ಬ ಆಟೋಚಾಲಕನ ನಡವಳಿಕೆ ಇನ್ನೂ ವಿಚಿತ್ರವಾಗಿತ್ತು. ನಿನ್ನೆ ಬೆಳಿಗ್ಗೆ ನಾನು ನನ್ನ ಬೋಡು ತಲೆಯ ಅಂಚಿನಲ್ಲಿರುವ ಕುರುಚಲಿಗೆ ಆಯುಷ್ಕರ್ಮ ಮಾಡಿಸಿಕೊಂಡು ಹದಿಮೂರನೆಯ ಕ್ರಾಸಿನಲ್ಲಿ ನಡೆದು ಬರುತ್ತಿದ್ದೆ. ಮುಂದೆ ಬಲಕ್ಕೆ ತಿರುಗಿದರೆ ನಮ್ಮ ರಸ್ತೆ - ಆರನೇ ಮೇನ್. ಒಮ್ಮೆಲೇ ಒಂದು ಆಟೋ ಭರ್ರಂತ ಬಂದು ನನ್ನ ಪಕ್ಕದಲ್ಲಿ ಗಕ್ಕಂತ ಬ್ರೇಕ್ ಹಾಕಿ ನಿಂತಿತು. ಅದರ ಚಾಲಕನಾದರೋ ಬಹು ಸೌಜನ್ಯದ ವ್ಯಕ್ತಿ. ವಿನಯದ ಮೂರ್ತಿ ಆತ.

''ಸಾರ್ ಆರನೆಯ ಮೇನ್, ಹನ್ನೊಂದನೇ ಕ್ರಾಸ್ ಎಲ್ಲಿ ಬರುತ್ತೆ ದಯವಿಟ್ಟು ತಿಳಿಸ್ತೀರಾ?'' ಅಂತ ಕೇಳಿದ ನನಗೆ ಸಂತಸ ಉಕ್ಕಿ ಹರಿಯಿತು. ಈ ಸಂತಸಕ್ಕೆ

ಮೂರು ಕಾರಣಗಳಿದ್ದವು. ಒಂದು, ಆತನ ಸೌಜನ್ಯ. ಎರಡು, ಆತನ ಪ್ರಶ್ನೆಯನ್ನು ಅತಿ ಸುಲಭವಾಗಿ ಉತ್ತರಿಸುವ ಸಾಧ್ಯತೆ. ಮೂರು, ದಿನದ ಒಳ್ಳೆಯ ಕಾರ್ಯ (Good Turn) ವನ್ನ ಬೆಳಗ್ಗೆಯೇ ಮಾಡಿ ಮುಗಿಸಿ ಇತರ ಧೂರ್ತಕಾರ್ಯಗಳಿಗೆ ಇಡೀ ದಿನವನ್ನ ಮುಡಿಪಾಗಿಡುವ ಸದವಕಾಶ.

''ನೋಡಪ್ಪಾ, ಹೀಗೇ ಮುಂದಕ್ಕೆ ನೇರವಾಗಿ ಹೋಗಿ ಮೊದಲ ರಸ್ತೆಯಲ್ಲಿ ಎಡಕ್ಕೆ ತಿರುಗಿದರೆ ಆರನೇ ಮೇನ್. ಮುಂದೆ ಹೋದರೆ ಹನ್ನೊಂದನೇ ಕ್ರಾಸ್ ಸಿಗುತ್ತೆ'' ಅಂತ ಬಹು ವಿಶ್ವಾಸದಿಂದ ಹೇಳಿದೆ.

ಆತ ''ಥ್ಯಾಂಕ್ಸ್ ಸಾರ್'' ಅಂತ ಹೇಳಿ ಆಟೋವನ್ನ ಮುಂದೆ ನಡೆಸಿದ. ನಾನು ಚಲಿಸುತ್ತಿದ್ದ ಆಟೋವಿನ ಹಿಂಭಾಗವನ್ನೇ ನೋಡುತ್ತಾ ಮುಂದೆ ನಡೆದೆ. ಆಟೋ ನೇರವಾಗಿ ಮುಂದೆ ಸಾಗುತ್ತಿತ್ತು. ಆರನೇ ಮೇನ್ ರಸ್ತೆಯಲ್ಲಿ ಎಡಕ್ಕೆ ತಿರುಗಲೇ ಇಲ್ಲ. ರಸ್ತೆ ದಾಟಿ ನೇರವಾಗಿ ಮುಂದೆ ಹೋಯಿತು. ಅತಿ ದೂರದಲ್ಲಿ ಅದು ಚಿಕ್ಕ ಬಿಂಬವಾಗುವವರೆಗೂ ನಾನು ಅದನ್ನೇ ನಿಟ್ಟಿಸಿ ನೋಡಿ ನಂತರ ಮನೆಯ ಹಾದಿ ಹಿಡಿದೆ. ನನ್ನ ಮಾತಿನಲ್ಲಿ ಅವನಿಗೆ ಅಷ್ಟು ಅಪನಂಬಿಕೆ ಬರಲು ಕಾರಣವಾದರೂ ಏನು ಎಂಬ ಪ್ರಶ್ನೆಗೆ ನನಗೆ ಇಂದಿಗೂ ಉತ್ತರ ಸಿಕ್ಕಿಲ್ಲ.

ಮೊನ್ನೆ ಆಕಾಶವಾಣಿಗಾಗಿ ಇಂಟರ್ನೆಟ್ ಮೇಲೆ ಒಂದು ಫೀಚರ್ ಮಾಡುವ ಅವಕಾಶ ನನಗೆ ಒದಗಿತ್ತು. ಅಲ್ಲಿನ ನಿರ್ಮಲಾ ಎಲೆಗಾರ್‌ರವರು ಬಹು ದಕ್ಷತೆಯಿಂದ ನನ್ನ ಸ್ಕ್ರಿಪ್ಟನ್ನ ದೃಶ್ಯಾವಳಿಯಾಗಿ ಮೂಡಿಸಿದರು. ಇಂಟರ್ನೆಟ್ ಕುರಿತು ಜನಸಾಮಾನ್ಯರಿಗೆ ಮಾಹಿತಿ ನೀಡುವ ಉದ್ದೇಶ ಈ ಕಾರ್ಯಕ್ರಮದ್ದು. ಹಾಗಾಗಿ ಭಾರತದಲ್ಲಿ ಇಂಟರ್ನೆಟ್‌ನ ಭವಿಷ್ಯವೇನು? ಎಂಬ ಪ್ರಶ್ನೆಗೆ ಲೋಕಾಭಿರಾಮವಾಗಿ ಉತ್ತರ ನೀಡಬಹುದಾಗಿತ್ತೇ ವಿನಹ, ಕಠೋರ ಕುಹಕ ಸತ್ಯಗಳನ್ನ ಜನರಿಗೆ ಬಿತ್ತರಿಸುವುದು ಸಾಧ್ಯವಿರಲಿಲ್ಲ. ವಾಸ್ತವದಲ್ಲಿ ಅಮೆರಿಕೆಯಲ್ಲಿ ಇಂಟರ್ನೆಟ್ ವ್ಯಾಪಾರ ವಹಿವಾಟು ಯಶಸ್ವಿಯಾಗಲು ಮುಖ್ಯ ಕಾರಣ ಆ ಸಮಾಜದಲ್ಲಿನ ಟ್ರಸ್ಟ್ ಲೆವೆಲ್. ಸಾಮಾನ್ಯ ವ್ಯವಹಾರಗಳಲ್ಲಿ ವ್ಯಕ್ತಿ ವ್ಯಕ್ತಿಗಳ ನಡುವೆ ನಂಬಿಕೆಯಿಂದ ಮೋಸದ ಭಯವಿಲ್ಲದೇ ಆ ದೇಶದಲ್ಲಿ ವ್ಯವಹಾರ ನಡೆಸಬಹುದು. ನಕಲಿ ಮಾರ್ಕ್ಸ್ ಕಾರ್ಡ್, ನಕಲಿ CET ಫಲಿತಾಂಶಗಳು ಸರ್ವೇಸಾಮಾನ್ಯವಾಗಿರುವ ನಮ್ಮ ದೇಶದಲ್ಲಿ, ಇಂಟರ್ನೆಟ್ ಬ್ಯಾಂಕಿಂಗ್‌ನ ಎನ್ ಕ್ರಿಪ್ಷನ್ ಕೋಡ್‌ಗಳ ಮಾರಾಟವನ್ನೇ ಒಂದು ಲಾಭದಾಯಕ ಉದ್ಯಮವನ್ನಾಗಿ ಮಾಡುವ ಪ್ರಭೃತಿಗಳು ಹುಟ್ಟಿಬಂದರೆ ನನಗೆ ಆಶ್ಚರ್ಯವೇನಿಲ್ಲ.

ಕಳೆದ ವಾರ ಉಷಾ ನಮ್ಮ ಮನೆಗೆ ಬಂದಿದ್ದಳು. ಉಷಾ ಎನ್ನಾರೈ, ನನ್ನ ನಿಕಟ ಮಿತ್ರ ರವಿಯ ಮಗಳು ಈಕೆ. ಅವಳ ಜೊತೆಯಲ್ಲಿ ಅವಳ ಇಬ್ಬರು ಮಕ್ಕಳು. ಎರಡೂ ಗಂಡು. ದೊಡ್ಡವನಿಗೆ ಏಳು ವರ್ಷ ಇರಬಹುದು. ಚಿಕ್ಕವ ಐದರ

ಸುಮಾರು. ಇಬ್ಬರಿಗೂ ಅಮೆರಿಕೆಯ ವೈಲ್ಡ್ ವೆಸ್ಟ್ ಉಡುಪು. ಪುಟಾಣಿ ಜೀನ್ಸ್, ಟಾಪ್, ಕೌಬಾಯ್ ಹ್ಯಾಟ್, ಸೊಂಟದ ಸುತ್ತ ಅಗಲವಾದ ಬೆಲ್ಟ್. ಅದಕ್ಕೆ ಹೊಂದಿಸಿದಂತೆ ಪುಟಾಣಿ ಗನ್‌ಗಳು ಬೇರೇ. ಮಕ್ಕಳು ಬಲು ಮುದ್ದಾಗಿದ್ದವು. ಇಬ್ಬರೂ ಬಲು ತುಂಟ ಮಕ್ಕಳು. ನಮ್ಮ ಡ್ರಾಯಿಂಗ್ ರೂಮಿನಲ್ಲೇ ಯಾವ ಸಂಕೋಚವೂ ಇಲ್ಲದೇ ಅವು ತಮ್ಮ ಆಟ ಪ್ರಾರಂಭಿಸಿಬಿಟ್ಟಿವು. ವೈಲ್ಡ್‌ವೆಸ್ಟ್ ಆಟ. ಒಬ್ಬ ತನ್ನ ಗನ್ನನ್ನ ಸರಕ್ಕನೆ ಎಳೆದು ಡಿಶುಂ ಎನ್ನುವುದು. ಇನ್ನೊಬ್ಬ ''ಹಾ'' ಅಂತ ಕೂಗುತ್ತಾ ನೆಲದಮೇಲೆ ಸತ್ತಹಾಗೆ ಮಲಗಿಬಿಡುವುದು. ಡಿಶುಂ ಮಗು ಹ್ಹ, ಹ್ಹ, ಹ್ಹಾ ಎಂದು ನಗುವುದು. ಆಟ ಹೀಗೆ ಸಾಗಿತ್ತು. ಮಕ್ಕಳ ಆಟದ ಗಲಾಟೆ ಜಾಸ್ತಿಯಾಗಿ ದೊಡ್ಡವರ ಮಾತು ಕೇಳಿಸದಂತಾದಾಗ ಉಷಾ ರೇಗಿ,

''ಕಿರಣ್ ಸ್ಟಾಪ್ ದಟ್ ನಾಯ್ಸ್. ಗೋ ಎಂಡ್ ಪ್ಲೇ ಔಟ್ ಸೈಡ್'' ಎಂದು ಗದರಿಕೊಂಡಳು.

''ಪಾಪ ಮಕ್ಕಳು ಏನೋ ಆಟ ಆಡ್ಕೊಂಡಿವೆ. ಹಾಗೆಲ್ಲಾ ಗದರಿಕೊಬೇಡ ಉಷಾ. ಅರೀದ ಮಕ್ಕಳು ದೇವರ ಸಮಾನ ಅಂತಾರೆ'' ಅಂದೆ.

ಅಲ್ಲೇ ಕುಳಿತಿದ್ದ ನನ್ನ ತಮ್ಮ ನಡುವೆ ಬಾಯಿಹಾಕಿ,

''ಕರೆಕ್ಷನ್. ಮಕ್ಕಳು ದೇವರ ಸಮಾನ ಅಲ್ಲ. ದೇವರು ಮಕ್ಕಳ ಸಮಾನ. ಡಿಶುಂ ಮಾಡಿ ನಗುವುದು ಅವನ ಜಾಯಮಾನ'' ಎಂದು ಒಂದು ಗಾಹೆ ಹೇಳಿದ. ಗಾಹೆಯ ಅರ್ಥ ಬಿಡಿಸಿ ಹೇಳಲು ಅಲ್ಲೊಬ್ಬ ಬೋಧಿಸತ್ತ್ವ ಇರಲಿಲ್ಲ.

– ಶಿವಕುಮಾರ್



ಸಾಲ ತೀರಿಸುವ ಸುಲಭೋಪಾಯಗಳು

– ಕೃಷ್ಣ ಸುಬ್ಬರಾವ್


ಹರಿಶ್ಚಂದ್ರನ ಪಾಡನ್ನು ನೋಡಿದಾಗ ಅವನ ಬಳಿ ಒಳ್ಳೆ ಆರ್ಥಿಕ ಸಲಹೆಗಾರರಿರಲಿಲ್ಲ ಎಂಬುದು ಸ್ಪಷ್ಟ. ಸರ್ವಜ್ಞ ಕೂಡ ಸಾಲದ ಬಗ್ಗೆ ಒಳ್ಳೆ ಸಾಲುಗಳನ್ನು ಬರೆಯಲಿಲ್ಲ. ಭವ್ಯ ಭಾರತದ ನಿರ್ಮಾಣದ ಬಗ್ಗೆ ಯೋಚಿಸಲೇ ಇಲ್ಲ. ಸಾಲದ ಭದ್ರ ಬುನಾದಿಯಿಂದಲೇ 'ಪ್ರಗತಿ'ಯೆಂಬ ಚಿಂತನೆ ಬರಲೇ ಇಲ್ಲ. 'ಋಣ' ಅನ್ನೋವಾಗ ಅದು ಇರಬೇಕು ಅದನ್ನು ತೀರಿಸಬೇಕು ಎಂಬ ವಾಸ್ತವ ಅರಿವಾಗುತ್ತದೆ. ಋಣ ಇಲ್ಲದೇ ಇದ್ದರೆ ಎಲ್ಲವೂ ಶೂನ್ಯ ಬದುಕಿನಲ್ಲಿ ಅರ್ಥವೇ ಇಲ್ಲ, ನಾವೆಲ್ಲಾ ಸಾಲ ಮಾಡಬೇಕು, ತೀರಿಸುವ ಪ್ರಯತ್ನ ಮಾಡುತ್ತಲೇ ಇರಬೇಕು. ಹೆಬ್ಬೆಟ್ಟು ಒತ್ತಿ ಒಬ್ಬಟ್ಟು ಮಾಡಿಯಾದರೂ ಹಬ್ಬ ಆಚರಿಸಿ ಆನಂದವಾಗಿರಬೇಕು. ಸಾಲವೇ ನಮಗೆ ಜೀವಶಕ್ತಿ, ಚೈತನ್ಯ. ಮಾಡಿದ ಸಾಲವನ್ನು ತೀರಿಸುವ ಬಗ್ಗೆ ಎಲ್ಲರೂ ತಲೆಕೆಡಿಸಿಕೊಳ್ಳುತ್ತಾರೆ, ಇಲ್ಲಿ ಕೆಲವು ಉಪಾಯಗಳನ್ನು ಸಾರ್ವಜನಿಕರ ಉಪಯೋಗಕ್ಕೆ ಪಟ್ಟಿ ಮಾಡಲಾಗಿದೆ. ಇನ್ನೂ ಹೊಸ ಹೊಸ ಉಪಾಯಗಳಿದ್ದರೆ ಓದುಗರು ಪಟ್ಟಿಯನ್ನು ಉದ್ದ ಮಾಡಬಹುದು.

1. ಸಾಲವನ್ನು ನವೀಕರಿಸುವುದು. ಅಂದರೆ ಸಾಲ ಕೊಟ್ಟವರ ಬಳಿಯೇ ಹೋಗಿ ಮತ್ತಷ್ಟು ಸಾಲವನ್ನು ಪಡೆದು ಹಳೆ ಸಾಲ ತೀರಿಸಿ ಋಣ ಮುಕ್ತರಾಗಿ ಹೊಸ ಸಾಲಗಾರರಾಗಿ ಹೊರಬರಬಹುದು. ಇದು ಬ್ಯಾಂಕ್ ಅಥವಾ ಇತರ ಸಂಸ್ಥೆಗಳಲ್ಲಿ ಲಭ್ಯ. ಸಾಲ ತೀರಿಸಿ ಇನ್ನೂ ಸ್ವಲ್ಪ ಹಣವನ್ನು ಜೋಬಿಗೆ ಸೇರಿಸಿ ಬರುವುದು.
2. ಒಬ್ಬರ ಸಾಲವನ್ನು ತೀರಿಸಲು ಮತ್ತೊಬ್ಬರ ಹತ್ತಿರ ಸಾಲ ಮಾಡುವುದು ನಮಗೆ ಸಾಲ ಕೊಟ್ಟವರ ಸಂಖ್ಯೆಯನ್ನು ಹೆಚ್ಚು ಮಾಡಿಕೊಳ್ಳುವುದು. ಸಾಲವನ್ನು ವಾಪಸ್ಸು ಕೇಳಲು ಬರುವ ಒಂದೇ ಮುಖವನ್ನು ನೋಡಲು ಯಾರಿಗೆ ಇಷ್ಟ.
3. ಐದಾರು ಚಿಕ್ಕ ಚಿಕ್ಕ ಸಾಲಗಳನ್ನು ಒಂದೇ ಏಟಿಗೆ ತೀರಿಸಲು ಒಂದು ದೊಡ್ಡ ಸಾಲಮಾಡಿ, ನಮ್ಮ ಮನೆಯಲ್ಲಿ ಕಟ್ಟಿರುವ ನಾಯಿ ಗಂಟಲಿಗೆ ಸ್ವಲ್ಪ ರಿಲೀಫ್ ಕೊಡುವುದು. ನನ್ನ ಸ್ನೇಹಿತನೊಬ್ಬ ನಾಯಿಯನ್ನು ಕೂಡ ಕ್ರೆಡಿಟ್‌ನಲ್ಲಿ ತಂದ. ಆ ನಾಯಿಯೊ ಹಳೆಯ ಮಾಲಿಕ ಮತ್ತೆ ವಾಪಸ್ಸು ಎಳೆದುಕೊಂಡು ಹೋಗುವಾಗ ಅವನನ್ನೇ ಕಚ್ಚಿತಂತೆ. ನಾಯಿಗೆ ಲಾಯಲ್ಟಿ ಮುಖ್ಯ, ಸಾಲ ತೀರಿಸುವ ಬಗ್ಗೆ ತಲೆ ಕೆಡಿಸಿಕೊಳ್ಳುವುದಿಲ್ಲ.

4. ನಮಗೆ ಸಾಲ ಕೊಡುವವರ ಆರೋಗ್ಯವನ್ನು ಆಗಾಗ್ಗೆ ವಿಚಾರಿಸುತ್ತಿರಬೇಕು ಆಗ ಅವರಿಗೆ ಆರೋಗ್ಯ ಆದಷ್ಟು ಹದಗೆಡುತ್ತದೆ. ವೇದಾಂತದ ಮಾತನಾಡುವುದು ವಸೂಲಿಗಾಗಿ ಅವರು ಪಡುವ ಕಷ್ಟದ ಬಗ್ಗೆ ಅನುಕಂಪ ತೋರುವುದು. ಆಗ ಬಡ್ಡಿ ರಿಯಾಯಿತಿ ಅಥವಾ ಮನ್ನಾ ಮಾಡಿದಾಗ ಅಸಲಿನಲ್ಲೂ ರಿಯಾಯಿತಿ ಕೇಳುವುದು. ಅದನ್ನೆಲ್ಲಾ ಕೊಡಲು ಮುಂದಾದಾಗ 'ಗಬಕ್' ಅಂತ ಬೇರೆಕಡೆ ಹೊಸ ಸಾಲ ಮಾಡಿ ತೀರಿಸಿಬಿಡುವುದು ಹಳೆ ಸಾಲವನ್ನು.

5. ನಾವು ಕೊಡಬೇಕಾದ ಸಾಲ ಹಾಗೂ ನಮಗೆ ಬರಬೇಕಾದ ಹಣ (ಸಾಲ ವಸೂಲಿ) ಎರಡರ ಪಟ್ಟಿ ಮಾಡಿ ತಾಳೆ ಮಾಡುವುದು ನಮಗೆ ಬರಬೇಕಾದ ಹಣ ಅವರ ಹೆಸರುಗಳನ್ನು, ನಮ್ಮ ಕ್ರೆಡಿಟರ್ಸ್‌ಗೆ ಕೊಟ್ಟು ಅವರನ್ನೇ ವಸೂಲಿ ಅಧಿಕಾರಿಗಳನ್ನಾಗಿ ಪರಿವರ್ತಿಸುವುದು.

ನಮ್ಮ ಆಫೀಸಿನಲ್ಲಿ ನರಸಿಂಗರಾಯರು ಸತ್ತಾಗ ಅವರ ಆತ್ಮಕ್ಕೆ ಶಾಂತಿ ಕೋರಲು ಬಂದವರ ಸಂಖ್ಯೆ ದಾಖಲೆಯಾಗಿತ್ತು. ಅವರನ್ನು ಕಂಡರೆ ಅಷ್ಟೊಂದು ಪ್ರೀತಿಯೆಂದು ನೀವು ಭಾವಿಸಿದರೆ ಅದು ತಪ್ಪು. ಅವರು ಬಹಳ ಜನಕ್ಕೆ ಸಾಲ ಕೊಟ್ಟಿದ್ದರು. ಅವರಿಗೆ ಮಕ್ಕಳು ಇರಲಿಲ್ಲ. ಹೀಗಾಗಿ ಅವರಿಂದ ಸಾಲ ಪಡೆದವರು ನರಸಿಂಗರಾಯರ ಸಾವಿನ ಬಗ್ಗೆ ಖಚಿತಪಡಿಸಿಕೊಳ್ಳಲು ಹರಿಶ್ಚಂದ್ರ ಘಾಟಿಗೆ ಬಂದಿದ್ದರು. ಒಮ್ಮೆಲೆ ಬಹುಜನದ ಸಾಲ ಮನ್ನ ಆಯಿತು. ವ್ಯಕ್ತಿಯನ್ನು ಹೊಗಳಿದ್ದೇ ಹೊಗಳಿದ್ದು.



ಅನಾಮಿಕ ಪತ್ರಗಳು

– ಜಾ. ರಾ.

ಶಿಪ್ರಾನದಿಯ ತೀರದಲ್ಲಿದ್ದ ರಾಮಗಿರ್ಯಾಶ್ರಮಕ್ಕೆ ಒಬ್ಬ ಶಾಪಗ್ರಸ್ತ ಯಕ್ಷನು ದೇವಲೋಕದಿಂದ ಬಂದು ಇಲ್ಲಿ ಒಂಟಿಯಾಗಿ ಜೀವಿಸಬೇಕಾಯಿತು. ತನ್ನ ಪ್ರಿಯತಮೆಯ ಅಗಲಿಕೆಯಿಂದುಂಟಾದ ವಿರಹಾವಸ್ಥೆಯಿಂದ ಅವನು ಬೆಂದು ಕೃಶನಾಗಿದ್ದ. ಸಾವಿರಾರು ಮೈಲಿಗಳ ದೂರದಲ್ಲಿದ್ದ ಅಲಕಾನದಿಯಲ್ಲಿ ಅವನ ಪ್ರಿಯತಮೆ ಇದ್ದಿದ್ದು. ಅವಳಿಗೆ ಒಂದು ಸಂದೇಶವನ್ನು ಕಳಿಸಿಬೇಕೆನ್ನುವ ಆಸೆ ಯಕ್ಷನಿಗೆ. ಪತ್ರದ ಮೂಲಕ ಕಳಿಸುವುದಕ್ಕೆ ಈಗಿನ ಹಾಗೆ ಇ-ಮೈಲ್, ಸ್ಪೀಡ್‌ಪೋಸ್ಟ್, ಕೊರಿಯರ್ರ್ ಯಾವುದಿತ್ತು ಆವಾಗ. ಹತಾಶನಾಗಿ ಅವನು ಅಲ್ಲೆ ಇದ್ದ ಒಂದು ಕಲ್ಲು ಬಂಡೆಯ ಮೇಲೆ ಕೂತ. ಆಷಾಡಮಾಸ. ಒಂದು ಮೋಡವು ಪರ್ವತದ ಸಮೀಪದಲ್ಲಿ ತೇಲಿಬಂದು ಕಾಣಿಸಿಕೊಂಡಿತು. ಯಕ್ಷನು ಉದ್ವೇಗಗೊಂಡು "ಅಯ್ಯಾ ಮೋಡವೆ, ನನ್ನ ಸಂದೇಶವನ್ನು ದೂರದ ಅಲಕಾನಗರಕ್ಕೆ ತೆಗೆದುಕೊಂಡುಹೋಗುವೆಯ" ಎಂದನು. ಅದೇ ಸಮಯಕ್ಕೆ ಸರಿಯಾಗಿ ಸುತ್ತಲೂ ಹರಡಿಕೊಂಡಿದ್ದ ಸುಂದರ ಗಿರಿಶೃಂಗಗಳ ಮಾರ್ಗದಲ್ಲಿ ವಾಕಿಂಗ್ ಹೋಗುತ್ತಿದ್ದ ಕವಿಕಾಳಿದಾಸನಿಗೆ ಯಕ್ಷನ ಮಾತುಗಳು ಕೇಳಿಸಿತು. ಅವನು ಅಲ್ಲೇ ನಿಂತು ಕೃಶನಾಗಿದ್ದ ಯಕ್ಷನ ದುರವಸ್ಥೆಯನ್ನು ಕಂಡು ಮರುಗಿದನು. ಯಕ್ಷನು ವಿವೇಚನಾ ಶಕ್ತಿಯನ್ನು ಕಳೆದುಕೊಂಡು ಮೋಡಕ್ಕೆ ಸಂಬೋಧಿಸುತ್ತಿದ್ದಾನಲ್ಲ, ಮೋಡ ಎಂದಾದರೂ ಈ ಕೆಲಸವನ್ನು ಮಾಡೀತೆ. ಸ್ವರ್ಗದಲ್ಲಿದ್ದ ಅವನಿಗೆ ಪ್ರಕೃತಿಯ ಸ್ನೇಹವಾದರೂ ಎಲ್ಲಿತ್ತು. ಗಿಡ, ಮರ, ಹೂ, ಬಳ್ಳಿ ಮೋಡ ಮಳೆಗಳೊಡನೆ ಬೆರೆತು ಸದಾ ಅವುಗಳ ಕೃಪಾಶ್ರಯದಲ್ಲೇ ಇದ್ದು ಅವುಗಳ ಜೊತೆಯಲ್ಲಿ ಮಾತಾಡುವ ಕಲೆಯನ್ನು ಸಾಧಿಸಿ ಸಿದ್ಧಿಯನ್ನು ಪಡೆದಿರುವ ಕವಿಯಾದ ತಾನು ಆ ಮೋಡದ ಕೈಲಿ ಈ ಪರೋಪಕಾರದ ಕೆಲಸವನ್ನು ಮಾಡಿಸಬೇಕು ಎಂದುಕೊಂಡು, ಆ ಕಾಡಿನಲ್ಲೆ, ಹೆಸರು, ಕುಲ ಗೋತ್ರಗಳೊಂದೂ ಗೊತ್ತಿಲ್ಲದ ಆ ಶಾಪಗ್ರಸ್ತ ಯಕ್ಷನ ಅನಾಮಿಕ ಅಲಿಖಿತ ಸಂದೇಶಕ್ಕೆ ಯಥೇಚ್ಛವಾಗಿ ಶೃಂಗಾರ ರಸವನ್ನು ಸಿಂಪಡಿಸಿ ರಾಮಗಿರಿಯಿಂದ ಅಲಕಾನಗರದವರೆಗೂ ಒಂದು ಕಾವ್ಯಲತೆಯನ್ನು ಹಬ್ಬಿಸಿ ಲೋಕಕ್ಕೆ ವಿರಹ ವೇದನೆಯ ಜೊತೆಗೆ ಅನಾಮಿಕ ಪತ್ರಗಳ ಹುಚ್ಚು ಹಿಡಿಸಿದ. ಆ ಶಾಪಗ್ರಸ್ತ ಯಕ್ಷನ ಅನಾಮಿಕ ಸಂದೇಶವೇ ಅನಾಮಿಕ ಪತ್ರಗಳ ಮಹಾಪೂರಕ್ಕೆ ನಾಂದಿ.

ಅಂತಃಪುರದ ರಾಣಿಯರ ಅನಾಮಿಕ ಪ್ರೇಮಪತ್ರಗಳನ್ನಾಗಲೀ, ಸಿಂಹಾಸನದ ಆಕ್ರಮಣಕ್ಕೆ ಅರಮನೆಗಳಲ್ಲಿ ನಡೆಯುತ್ತಿದ್ದ ಗೂಢಚರ್ಯೆಯ

ಅನಾಮಿಕ ಪತ್ರಗಳನ್ನಾಗಲಿ, ಶತ್ರು ಸೈನ್ಯದ ಬಲಾಬಲಗಳನ್ನು ಅರಿಯಲು ತರಿಸಿಕೊಳ್ಳುತ್ತಿದ್ದ ರಹಸ್ಯ ಅನಾಮಿಕ ಪತ್ರಗಳನ್ನಾಗಲೀ ನಾನು ಇಲ್ಲಿ ಪ್ರಸ್ತಾಪ ಮಾಡುತ್ತಿಲ್ಲ. ಅವುಗಳ ಬಗ್ಗೆ ಸಾಕಷ್ಟು ಸಂಶೋಧನೆ ಮಾಡುತ್ತಿರುವ ನನಗೆ ಯಾವ ಪುರಸ್ಕಾರವೂ ಇನ್ನೂ ಸಿಕ್ಕಿಲ್ಲ. ಹೋಗಲಿ, ಅನಾಮಿಕ ಪತ್ರಗಳ ಪರಂಪರೆ ಸಂಸ್ಕೃತಿ, ವಿಜ್ಞಾನ, ನಾಗರೀಕತೆ ಬೆಳೆದುಬಂದ ಹಾದಿಯಲ್ಲಿಯೇ ಬೆಳೆದು ಬರುತ್ತಿರುವುದು ಆಶಾದಾಯಕ ಸಂಗತಿ.

ಪ್ರಜಾಪ್ರಭುತ್ವದಲ್ಲಿ ರಾಜಕೀಯ ಪಕ್ಷಗಳ ಅಧ್ಯಕ್ಷನಿಗೆ ಈ ರೀತಿ ಅನಾಮಿಕ ಪತ್ರಗಳು ಬರುತ್ತಲೇ ಇರುವುದಂತೆ:

ಅಧ್ಯಕ್ಷ ಮಹೋದಯ, ಇಷ್ಟರಲ್ಲೆ ನಿಮ್ಮ ಪಕ್ಷ ಚಿಂದಿ ಏಳುತ್ತದೆ 9 ಜನ ಖದೀಮರು ಪಕ್ಷಾಂತರ ಮಾಡಿ ವಿರೋಧ ಪಕ್ಷಕ್ಕೆ ಸೇರಿಕೊಳ್ಳುತ್ತಾರೆ. ಲಕ್ಷಾಂತರ ಏರ್ಪಾಟಾಗಿದೆ. ಅವರು ಯಾರೆಂದರೆ ಅವರುಗಳ ಹೆಸರಿನ ಮೊದಲನೆ ಅಕ್ಷರ ಇಲ್ಲಿ ಕೊಟ್ಟಿದ್ದೇನೆ. ನೀವೇ ಊಹಿಸಿಕೊಳ್ಳಬಹುದು. ಆಮೇಲೆ ವಿಧಾನಸೌಧದ ಬಾವಿಗೆ ನಿಮ್ಮನ್ನೇ ತಳ್ಳುತ್ತಾರೆ. ರೇಟುಜಾಸ್ತಿಮಾಡಿ ಎಂದು ಬರೆದ ಅನಾಮಿಕ ಪತ್ರ ಅಧ್ಯಕ್ಷನ ಕೈ ಸೇರುತ್ತದೆ. ಇದು ಒಂದು ರೀತಿಯ ರೆಡ್‌ಸಿಗ್ನಲ್. ಪಾರ್ಟಿಪಾಲಿಟಿಕ್ಸ್‌ನಲ್ಲಿ ನುರಿತ ಮೇಧಾವಿಗಳಿಗೆ ಇದು ಚೆನ್ನಾಗಿ ಅರ್ಥವಾಗುತ್ತದೆ.

ಅನಾಮಿಕ ಪತ್ರಗಳ 'ಕ್ಲಿಯರೆನ್ಸ್' ಹಾಗೂ 'ಡೆಲಿವರಿ' ಸಾಮಾನ್ಯ ವಿಷಯಗಳಲ್ಲ - ಅದೊಂದು ಭೀಕರ ಕಲೆ. ಕೆಲವರು ಈ ಕಲೆಯನ್ನು ಸಾರ್ವಜನಿಕ ಹಿತಾಸಕ್ತಿಗೆ ಬಳಸುತ್ತ ಬಂದಿರುತ್ತಾರೆ. ಅನಾಮಿಕ ಪತ್ರಗಳ ವಿತರಣೆಗೆ ನಮ್ಮ ದೇಶದಲ್ಲಿ ಪ್ರಾಚೀನ ಕಾಲದಿಂದಲೂ ತುಂಬಾ ಅಗ್ಗದ ಸಾಧನಗಳನ್ನು ಬಳಸುತ್ತಿರುವುದು ಗಮನಿಸಬೇಕಾದ ವಿಷಯ. ಇದು ನಮ್ಮ ಸಾಂಸ್ಕೃತಿಯ ಪರಂಪರೆಯನ್ನೂ, ವಿಶ್ವದ ಸಮಸ್ತ ಚರಾಚರ ವಸ್ತುಗಳೂ ಭಗವಂತನ ಸೃಷ್ಟಿಯಲ್ಲಿ ಒಂದೇ ಎನ್ನುವ ಧರ್ಮ ಸೂಕ್ಷ್ಮವನ್ನು ಎತ್ತಿ ಹಿಡಿಯುತ್ತದೆ. ಶಾಪಗ್ರಸ್ತ ಯಕ್ಷನು ಮೋಡವನ್ನು ಆಶ್ರಯಿಸಿದಂತೆ ದೇವತೆಗಳ ಶಾಪಕ್ಕೆ ತುತ್ತಾಗಿ ಭರತಖಂಡದ ನದಿ ತೀರಗಳಲ್ಲಿ, ಪರ್ವತದ ತಪ್ಪಲುಗಳಲ್ಲಿ ಜನ್ಮವೆತ್ತಿದ ಎಷ್ಟೋ ಜನ ನತದೃಷ್ಟ ಕಿನ್ನರರು, ಕಿಂಪುರಷರು ತಮ್ಮ ಅನಾಮಿಕ ವೃತ್ತಾಂತಗಳನ್ನು ನಾಯಿ, ಕೋತಿ, ಗಿಣಿ, ಹಾವು ಮುಂತಾದ ಪ್ರಾಣಿಗಳ ಮೂಲಕ ರವಾನಿಸಿದ ದೃಷ್ಟಾಂತಗಳನ್ನು ನಮ್ಮ ಪುರಾಣಗಳಲ್ಲಿ ಓದಿದ್ದೇವೆ. ಈ ಕಥೆಗಳು ನಮ್ಮ ಚಲನಚಿತ್ರ ನಿರ್ಮಾಪಕರನ್ನು ಆಕರ್ಷಿಸಿದ್ದರಲ್ಲಿ ಆಶ್ಚರ್ಯವೇನಿದೆ? ಸಿನಿಮಾಗಳಲ್ಲಿ ಅನಾಮಿಕ ಪ್ರೇಮಪತ್ರಗಳನ್ನು ನಾಯಕ ನಾಯಕಿಯರಿಗೂ, ಭಯೋತ್ಪಾದಕ ಅನಾಮಿಕ ಪತ್ರಗಳನ್ನು ಖಳನಾಯಕ ನಾಯಕಿಯರಿಗೂ ಬಟವಾಡೆ ಮಾಡುವುದು ನಾಯಿ, ಕೋತಿಗಳೆ! ಮುಂದೆ ಔರಂಗಜೇಬ್ ಕಾಲಕ್ಕೆ

ಈ ಕೆಲಸವನ್ನು ಪಾರಿವಾಳಗಳಿಗೆ ಒಪ್ಪಿಸಲಾಯಿತು. ಆಮೇಲೆ ಸ್ವಯಂ ಉದ್ಯೋಗ ಯೋಜನೆಯ ಅನುಷ್ಠಾನಕ್ಕೆ ವೈಟ್ ಕಾಲರ್ ಷರ್ಟು, ಪ್ಯಾಂಟುಗಳನ್ನು ತೊಟ್ಟ ಒಂದು ಪಡೆಯೇ ಈಗ ಸಿದ್ಧವಾಗಿದೆ. 'ರಿಪೋರ್ಟರ್' ಮುಂತಾದ ಧಾರಾವಾಹಿಗಳಲ್ಲಿ ಈ ಬೇಹುಗಾರಿಕೆಯ ಪಡೆಗಳ ಕಾರ್ಯವೈಖರಿಯನ್ನು ಈಗಾಗಲೇ ನೋಡಿದ್ದೀರಿ. ಹಿಂದೆ ಹಸ್ತಿನಾಪುರವಾಗಿದ್ದ ದೆಹಲಿಯಲ್ಲೇ ರಾಜಕೀಯ ಬೇಹುಗಾರಿಕೆಯ ವೈವಿಧ್ಯಮಯ ಅನಾಮಿಕ ಪತ್ರಗಳನ್ನು ಸೃಷ್ಟಿಸುವ ದೊಡ್ಡ ದೊಡ್ಡ ಕೈಗಾರಿಕೆಗಳು ಬೆಳೆಯುತ್ತಿರುವುದು ಐತಿಹಾಸಿಕ ಸಂಗತಿ. ಏನೇ ಆಗಲಿ 'ಅನಾನಮಸ್ ಲೆಟರ್ಸ್ ದಟ್ ಮೇಡ್ ಹಿಸ್ಟ್ರಿ' ಅಂದರೆ ಚರಿತ್ರಾರ್ಹವಾದ ಅನಾಮಿಕ ಪತ್ರಗಳ ಪಟ್ಟಿ ನಮಗೆ ಈವರೆಗೂ ದೊರಕಿಲ್ಲದಿರುವುದು ನಮ್ಮ ರಾಷ್ಟ್ರದ ದುರಾದೃಷ್ಟ. ನಮ್ಮ ಚರಿತ್ರೆಕಾರರ ಅಲಕ್ಷ್ಯ ಧೋರಣೆಯೇ ಇದಕ್ಕೆ ಕಾರಣ. ಆದರೂ "History speaks it self" ಅಲ್ಲವೆ? ಚರಿತ್ರೆಯನ್ನು ಯಾರೂ ತಿರುಚಲಾರರು!

ಆಧುನಿಕ ಅನಾಮಿಕ ಪತ್ರಪ್ರಪಂಚ ಒಂದು ಸುಂದರ ಪಾರ್ಕ್ ಇದ್ದ ಹಾಗೆ. ಅದರಲ್ಲಿರುವ ಅನೇಕ ವರ್ಣದ ವಿವಿಧ ರೂಪಿನ ಚಿತ್ರವಿಚಿತ್ರ ಹೂಗಳ ಹೆಸರಂತೂ ನನಗೆ ತಿಳಿಯದು, ಅನಾಮಿಕ ಪತ್ರಗಳ ಒಡೆಯ ಒಡತಿಯರಂತೆ. ಆ ಪುಷ್ಪಗಳು ಅರಳಿ ಕೆಳಗೆ ಬಿದ್ದು ಹೋಗುತ್ತಿವೆ. ಅರಳಿದಾಗ ಆ ಹೂಗಳನ್ನು ನೋಡಿ ಸಂತೋಷ ಪಡುವುದಷ್ಟೆ ಅಲ್ಲಿ ಸಿಗುವ ಮೋಜು.

ಕೆಲವು ದಿನಗಳ ಹಿಂದೆ ನಾನು ಮನೆ ಬೀಗ ತೆಗೆದು ಮುಂಬಾಗಿಲನ್ನು ತಳ್ಳಿದಾಗ ಬಾಗಿಲ ಸಂದಿಯಲ್ಲಿ ತೂರಿಸಿದ್ದ ಒಂದು ಕವರು ಕೆಳಕ್ಕೆ ಬಿತ್ತು. ಹೆಸರು ವಿಳಾಸ ನನ್ನದೆ. ಕುತೂಹಲದಿಂದ ಕವರನ್ನು ಒಡೆದು ಓದಿದೆ. ಅದು ಒಂದು ಅನಾಮಿಕ ಪತ್ರ. ಈ ಸಲ ತಿರುಪತಿ ತಿಮ್ಮಪ್ಪನ ಹೆಸರಿನಲ್ಲಿ ಬಂದಿರಲಿಲ್ಲ. ಯಾವುದೋ ಊರಿನ ಅನಾಮಧೇಯ ಬಾಬ. ಪತ್ರ ಹೀಗಿತ್ತು.

''ಸ್ವಾಮಿ ಎಂ.ಡಿ. ಸಾಹೇಬರೆ, ನಿಮ್ಮ ಚಿಂತೆಗೆ ಕಾರಣವೇನೆಂಬುದು ನಮ್ಮ ಗುರುಗಳಿಗೆ ಗೊತ್ತು. ಈ ಜನ್ಮದಲ್ಲಿ ಇನ್ನು ಮುಂದೆ ನಿಮಗೆ ಯಾವ ಹೆಂಗಸಿಂದಲೂ ಯಾವುದೇ ರೀತಿಯ ಕಷ್ಟಗಳು ಬಾರದಂತೆ ನಮ್ಮ ಬಾಬರವರು ಮಾಯ ಮಾಟ ಮಾಡಿ ಪರಿಹರಿಸುತ್ತಾರೆ. ಆ ಹೆಂಗಸಿಂದ ಈಗಾಗಿರುವುದೇ ಸಾಕು. ಈಗ ಹೊಸದಾಗಿ ನಿಮಗೆ ಇನ್ನೊಂದು ಶನಿ ಗಂಟು ಬಿದ್ದಿದೆ. ಅದರಿಂದ ಪಾರುಮಾಡಿ ಅಷ್ಟೈಶ್ವರ್ಯಗಳನ್ನು ಸಂಪಾದಿಸಲು ನೀವು ಏನುಮಾಡಬೇಕೆಂಬುದನ್ನು ಖುದ್ದು ಬಾಬಾರವರೇ ನಿಮಗೆ ತೋರಿಸಿ ಅನುಗ್ರಹಿಸುತ್ತಾರೆ. ಬಾಬರವರ ಮಹಿಮೆಯನ್ನು ನೀವು ಶಂಕಿಸಬಾರದು. ಬೆಗ್‌ಬಾಬರವರು ಮಾನಸಸರೋವರದಲ್ಲಿ ಸ್ನಾನಮಾಡಿ ಟಿಬೆಟ್ಟಿನ ಮಂತ್ರವಾದಿಗಳಿಂದ ಒಂದು ಜೊತೆ ತಲೆಬುರುಡೆಗಳನ್ನು ತಂದಿರುತ್ತಾರೆ.

ಬಾಬರವರ ಸೇವೆ ಮಾಡುವುದರಿಂದ ನಿಮ್ಮ ಸಕಲ ಆಶೆಗಳೂ ಈಡೇರುತ್ತವೆ. ಈಗಾಗಲೇ ಬಾಬರವರ ಸೇವೆ ಮಾಡಿದ ಅಸಂಖ್ಯಾತ ಶಿಷ್ಯವರ್ಗದವರಿಗೆ ಕೆಲಸ, ಗ್ರೇಡು ಮತ್ತು ಉನ್ನತ ಉದ್ಯೋಗಗಳು ಸಿಕ್ಕಿವೆ. ಬಾಬರವರಿಗೆ ಪರಕಾಯ ಪ್ರವೇಶ ಮಾಡುವ ವಿದ್ಯೆಯೂ ಸಿದ್ಧಿಸಿದೆ. ಅವರು ಯಾವ ಹೊತ್ತಿನಲ್ಲಿ ಯಾವ ಪರಕಾಯ ಪ್ರವೇಶ ಮಾಡುತ್ತಾರೋ ಅವರ ಸಮೀಪ ವರ್ತಿಗಳಾದ ಶಿಷ್ಯರಿಗೂ ತಿಳಿಯುವುದಿಲ್ಲ. ಹೀಗಿರುವಾಗ ನೀವು ಬಾಬರವರನ್ನು ಟೀಕೆ ಮಾಡುವುದು, ಅವಹೇಳನ ಮಾಡುವುದು ನಿಮಗೆ ಹಾನಿಕರ. ಈ ಕಾಗದವನ್ನು ಹರಿದು ಹಾಕುವುದಾಗಲಿ, ತಿಪ್ಪಗೆ ಬಿಸಾಡುವುದಾಗಲೀ ಮಾಡಿದ್ದೇ ಆದರೆ ನೀವು ನಿಮ್ಮ ಎರಡೂ ಕಣ್ಣುಗಳನ್ನು ಕಳೆದುಕೊಳ್ಳುತ್ತೀರಿ. ರೇಪ್, ಬಾಂಬ್‌ಬ್ಲಾಸ್ಟ್, ಬಿಸ್ಕತ್ ಕೇಸುಗಳಲ್ಲಿ ಸಿಕ್ಕಿಹಾಕಿಕೊಳ್ಳುತ್ತೀರಿ. ನಾಳೆ ಸ್ನಾನಮಾಡಿ ಮಡಿಯಲ್ಲಿ ಈ ಕಾಗದದ 21 ನಕಲುಗಳನ್ನು ಮಾಡಿ 21 ಸದ್‌ಗೃಹಸ್ಥರಿಗೆ ಕೂಡಲೇ ರವಾನಿಸಿ. ಆ ಸಂಸಾರಗಳೂ ಉದ್ಧಾರವಾಗುತ್ತವೆ. ನಿಮ್ಮ ದುರಹಂಕಾರ, ಅಚಾತುರ್ಯಗಳಿಂದ ಸರಪಳಿಯ ಕೊಂಡಿ ಕಿತ್ತುಹೋದರೆ ನೀವು ದುರ್ಮರಣಕ್ಕೆ ತುತ್ತಾಗುತ್ತೀರಿ. ನಿಮ್ಮ ಮನೆಯ ಈಶಾನ್ಯ ದಿಕ್ಕಿನಲ್ಲಿ ಒಂದು ಎಕ್ಕದ ಗಿಡ ಬೆಳೆಯುತ್ತಿರುವುದು ನಿಮ್ಮ ಗಮನಕ್ಕೆ ಬಂದಿದೆಯೆ?''

ಕಾಗದವನ್ನು ಮಡಿಚಿ ಜೋಪಾನವಾಗಿ ಒಳ ಜೇಬಿನಲ್ಲಿಟ್ಟುಕೊಂಡೆ. ಮೈ ಎಲ್ಲ ಕಿಡಿಕಿಡಿಯಾಯಿತು. ಒದೆಯೋಣವೆಂದರೆ ಯಾರನ್ನ ಒದೆಯುವುದು! ಅನಾಮಿಕ ಪತ್ರ ತನ್ನ ಕೆಲಸವನ್ನುಂಟುಮಾಡಿ ಮುಗಿಸಿತ್ತು.

ಗ್ರಹಚಾರಗಳು ಬಂದರೆ ಜೊತೆಜೊತೆಯಾಗಿ ಬರುತ್ತವಂತೆ. ಅದೇ ಹೊತ್ತಿಗೆ ಮನೆಯಾಕೆ ನಾಲ್ಕು ರೇಷ್ಮೆ ಸೀರೆಗಳನ್ನು ಅಂಗಡಿಯಿಂದ ತಂದು ಹತ್ತು ಸಾವಿರ ರೂಪಾಯಿ ಬಿಲ್ಲನ್ನ ನನ್ನ ಕೈಯಲ್ಲಿಟ್ಟಳು. ಒಳಜೇಬಿನಲ್ಲಿದ್ದ ಅನಾಮಿಕ ಪತ್ರ ಹಾವಿನಂತೆ ಹೆಡೆ ಎತ್ತಿ ಬುಸ್ ಎಂದಿತು. ನಾನು ಅದಕ್ಕೆ ಹೆದರಲಿಲ್ಲ. ಹೆದರಿದ್ದು ಹತ್ತುಸಾವಿರ ರೂಪಾಯಿ ಬಿಲ್ಲಿಗೆ, ಹಗಲು ದರೋಡೆಗೆ! ಮಧ್ಯೆ ರಾತ್ರಿಯಾದರೂ ನಿದ್ದೆ ಹತ್ತಲಿಲ್ಲ. ಟಿ.ವಿ. ಹಾಕಿದೆ. ಫಾರಿನ್ ಭೂತಗಳು ಕುಣಿಯುತ್ತಿತ್ತು. ಕಿಟಿಕಿ ಬಾಗಿಲುಗಳನ್ನು ಭದ್ರವಾಗಿ ಹಾಕಿ ಹತ್ತುಸಾವಿರ ನೀಗಬೇಕಾಗಿರುವ ಕುತ್ತದಿಂದ ಪಾರಾಗಲು ಒಂದು ನೀಚ ಕೆಲಸವನ್ನು ಮಾಡಿದೆ. ಅದೇ ನಾನು ಸೃಷ್ಟಿಸಿದ ಅನಾಮಿಕ ಪತ್ರ - ಓದಿ.

''ಓ ಮೋಹನಾಂಗಿ, ನಿನಗೆ ಸಾಟಿಯಾಗುವ ಸುಂದರ ವಸ್ತುವೊಂದನ್ನು ಕಾಣದಿಹೆ ಜಗದಲ್ಲಿ. ಬೆಳಗೆದ್ದು ಕಾಫಿ ಕುಡಿಯುವ ಮುನ್ನ ನನ್ನೆದುರಿಗೆ ಬಂದು ನಿಲಲ್ಲುವ ಮುಗುದೆ. ಹೊರಗೆ ಚೆಲ್ಲಿದೆ ಕೆಂಪು ಮಿಶ್ರಿತ ಬಿಳುಪು. ನಿನ್ನ ಮುಗ್ಧ ಮುದ್ದು ವದನದಲಿ ಮೂಡಿದ ನಾಚಿಕೆಯ ಕೆಂಪು, ನಿನ್ನ ನಾಸಿಕದ ಸೊಂಪು, ನೀ ಮುಡಿದಿರುವ ಸಂಪಿಗೆಯ ಕಂಪು, ಹಾ ಪ್ರಿಯೆ, ಚೆಲುವೆ, ನಿನ್ನ ನಾ ಬಿಡಲಾರೆ.

ಎನ್ನ ಪ್ರೇಮಪುತ್ಥಳಿಯೆ ಅಂದಿನಾ ಕಾಲೇಜ್ ದಿನಗಳ ಮರತೆಯ. ಎಡಗೈಲಿ ಕೊಟ್ಟಿದ್ದನ್ನು ಬಲಗೈಲಿ ತೆಗೆದುಕೊಳ್ಳುವುದೆ. ಎಂದು ಬರುವೆ? ಎಂದು ಬರುವೆ? ಕಾದಿಹೆನು ಲೈಟ್ ಕಂಬದ ಕೆಳಗೆ ಹಗಲಿರಳೂ... ನಿನಗೊಪ್ಪುವ ಕನಕಾಂಬರಿ, ಎಳೆಹಸಿರು, ತಿಳಿನೀಲಿ ತೆಳು ಹಳದಿಯ ನಾಲ್ಕು ಸೀರೆಗಳನ್ನು ನಿನಗೆ ಕಾಂತಳದಲ್ಲಿ ಕೊಡಿಸಿರುವೆ, ... ಬೇಗ ಬಾ ಆ ದ್ರಾಬೆಯನು ತೊರೆದು...''

ಬೆಳಿಗ್ಗೆ ಕಾಫಿ ಬಟ್ಟಲು ಹಿಡಿದು ಅರ್ಧಾಂಗಿ ನಡೆದು ಬಂದ ತರಹ ನೋಡಿದಾಗಲೆ ವಿಶ್ವಾಸ ನಿರ್ಣಯವು ಬಿದ್ದುಹೋಗುವ ಸ್ಪಷ್ಟ ಸೂಚನೆಗಳು ನನಗೆ ಗೋಚರವಾಯಿತು. ಆ ಹೊತ್ತಿಗಾಗಲೆ ಒಂದು ಲಕೋಟೆ ಕಿಟಕಿ ಸರಳುಗಳ ಮಧ್ಯೆ ತೂರಿಬಂದು ಅಡಿಗೆ ಮನೆಯ ಬಾಗಿಲ ಹತ್ತಿರವೇ ಬಿದ್ದಿತ್ತು. 'ಯಾವುದು ಈ ಕವರು' ಎಂದು ಅವಳೇ ಅದನ್ನು ಎತ್ತಿಕೊಂಡು ಒಡೆದು ಓದುತ್ತ ಕೂತುಕೊಂಡಳು. ಕಡೆಯ ಸಾಲಿಗೆ ಬರುವ ಹೊತ್ತಿಗೆ ಕುಸಿದು ತತ್ತರಿಸಿದಳು; ಇದನ್ನೆಲ್ಲ ನೋಡುತ್ತ, ತೆಪ್ಪಗಿರುವುದು ಹೇಗೆ, ಕಾಗದವನ್ನು ಕಿತ್ತುಕೊಂಡು ಓದಿದ ಶಾಸ್ತ್ರ ಮಾಡಿ 'ಏನು ಇದರ ರಹಸ್ಯ' ಬೇಗ ಹೇಳು ಎಂದೆ. ಅವಳಿಗೆ ಏನು ಹೇಳುವುದಕ್ಕೂ ತೋಚಲಿಲ್ಲ. ಎರಡು ಕಣ್ಣಲ್ಲೂ ಗಂಗೆ ಕಾವೇರಿ ಹರಿದು ಬರುತ್ತಿತ್ತು! ''ನೀವು ಇದನ್ನೆಲ್ಲ ನಂಬುತ್ತೀರ'' ಎಂದಳು ಚೇತರಿಸಿಕೊಂಡು. ''ನಂಬಬೇಕೋ, ಬಿಡಬೇಕೋ ನನಗೆ ತೋಚುತ್ತಿಲ್ಲ. ಆದರೂ ಈ ನಾಲ್ಕು ಸೀರೆಗಳು ನಮ್ಮ ಸರಸ ದಾಂಪತ್ಯವನ್ನು ಒಡೆಯುತ್ತಿದೆಯಲ್ಲ, ಅದಕ್ಕೇ ಹೇಳುವೆ?'' ಎಂದೆ.

''ಇಗೋ ನೋಡಿ, ಆ ಸೀರೆಗಳನ್ನು ಈ ಕ್ಷಣ ಅಂಗಡಿಗೆ ಹೋಗಿ ವಾಪಸು ಕೊಟ್ಟು ಬರುತ್ತೇನೆ. ಆಗಲಾದರೂ ನಂಬುತ್ತೀರೋ ಇಲ್ಲವೊ'' ಎಂದಳು. ಸೀರೆ ಪ್ಯಾಕೆಟ್ ಸಮೇತ ಒಂದೇ ಉಸಿರಿಗೆ ಓಡಿದಳು! ನನಗೂ ಅಯ್ಯೋ ಎನ್ನಿಸಿತು.

ಅನಾಮಿಕ ಕಾಗದಗಳನ್ನು ಬರೆಯುವುದು ಒಂದು ಕಲೆ, ಕೆಲವರಿಗೆ ಅದು ಹಾಬಿ ಅಥವಾ ಚಾಳಿ. ಇನ್ನು ಕೆಲವರಿಗೆ ಕಾಫಿ, ಸಿಗರೇಟಿನಂತೆ ಚಟ. ಅನಾಮಿಕ ಪತ್ರಗಳನ್ನು ಬರೆಯುವವರು ಅಂಜುಬುರುಕರೆ? ಹೇಡಿಗಳೆ? ಹಾಗೇನಿಲ್ಲ. ನಾನೇ ಬರೆದಿದ್ದೇನಲ್ಲ. ಕಾಲೇಜ್ ಹುಡುಗರು ಹುಡುಗಿಯರಿಗೆ ಅನಾಮಿಕ ಪ್ರೇಮಪತ್ರಗಳನ್ನು ಬರೆದು ಹೀರೋಗಳಂತೆ ವರ್ತಿಸುತ್ತಾರೆ. ಅವರಿಗೆ ಅದೊಂದು ಮನೋರಂಜನೆಯ ಸಾಧನ. ಡೈರೆಕ್ಟ್ ಆಗಿ ಪ್ರೇಮಭಿಕ್ಷೆಯನ್ನು ಬೇಡಿ ಕಪಾಳ ಸೇವೆಯನ್ನನುಭವಿಸುವುದಕ್ಕಿಂತ ಇದು ಹೆಚ್ಚು ಸುರಕ್ಷಿತ. ಮನಸ್ಸಿಗೆ ಕಿಂಚಿತ್ತು ಶಾಂತಿ ಸಿಗುತ್ತದೆ. ದವಡೆಯಲ್ಲಿ ಹಲ್ಲು ಉಳಿದುಕೊಳ್ಳುತ್ತದೆ. ಪ್ರೇಮವಿಜ್ಞಾನವು ಬೆಳೆದಂತೆಲ್ಲ ಈಗ ಅನಾಮಿಕ ಪ್ರೇಮಪತ್ರಗಳ ಮಾದರಿಗಳನ್ನು ಕಂಪ್ಯೂಟರುಗಳಿಗೆ ಅಳವಡಿಸಲಾಗಿದೆ. 'ಸೀತ ಔರ್ ಗೀತ' ಎನ್ನುವ ಹಾಗೆ ಎಂಥ ಅನಾಮಿಕ ಪ್ರೇಮಪತ್ರವಾದರೂ ಸರಿಯೆ, ಸೀತಳಿಗಾದರೂ ಕಳಿಸಬಹುದು,

ಗೀತಳಿಗಾದರೂ ಕಳಿಸಬಹುದು! ಗೋಡೆ ಬರಹಗಳಿಗಿಂತಲೂ ಅನಾಮಿಕ ಪ್ರೇಮ ಪತ್ರಗಳು ಹೆಚ್ಚು ಸುಸಂಸ್ಕೃತ.

ಅನಾಮಿಕ ಪತ್ರಗಳು ಬೆನ್ನು ಹಿಂದೆ ಕುಣಿಯುವ ಪ್ರೇತಗಳು ಎಂದು ಕೆಲವರು ಭಾವಿಸುತ್ತಾರೆ. ಇದು ತಪ್ಪು ಕಲ್ಪನೆ. ಅನಾಮಿಕ ಕಾಗದಗಳನ್ನು ಕಸದ ಬುಟ್ಟಿಗೆ ಒಗೆಯದೆ ಅವನ್ನು ಓದುವುದರಲ್ಲಿ ಹೆಚ್ಚು ಔಚಿತ್ಯವಿದೆ. ಅವುಗಳು ತೀರ ನಿಕೃಷ್ಟವೇನಲ್ಲ. ಅವುಗಳನ್ನು ಓದಿದಾಗ ಉಂಟಾಗುವ ತ್ರಿಲ್ ಮನಸ್ಸಿಗೆ ಖುಶಿ ಕೊಡುತ್ತದೆ. ಆ ಕಾಗದಗಳಲ್ಲಿ ಹೊರ ಹೊಮ್ಮುವ ಸಾಹಿತ್ಯದ ಕಂಪು ಭಾಷೆಯ ಪೆಂಪು, ಶೈಲಿಯ ಇಂಪು ನನಗೆ ಸ್ಫೂರ್ತಿಯನ್ನು ಕೊಟ್ಟಿದೆ. ಕಥೆ, ಕಾದಂಬರಿಗಳಿಗೆ ಸೊಗಸಾದ ವಸ್ತುಗಳನ್ನು ಕೊಟ್ಟಿದೆ. ನನ್ನ ಪತ್ತೆದಾರಿ ಕಾದಂಬರಿಗಳಿಗೆ ಅವೇ ಮೂಲ.

ಸರ್ಕಾರಿ ವಲಯಗಳಲ್ಲಿ ಬಹುಮಟ್ಟಿಗೆ ಚಾಲ್ತಿಯಲ್ಲಿದ್ದು ಮೇಲಧಿಕಾರಿಗಳಿಗೆ ಆಗಿಂದಾಗ್ಗೆ ಬರುತ್ತಿದ್ದ ಅನಾಮಿಕ ಅರ್ಜಿಗಳಿಗೆ ಮೂಗರ್ಜಿಗಳೆಂದು ಕರೆಯುತ್ತಾರೆ. ಅವುಗಳ ಭಾಷೆ, ಒಕ್ಕಣೆ ವಿಶಿಷ್ಟ ರೀತಿಯದು. ಅದನ್ನು ಪೋಷಿಸಿದ ಪಟೇಲರು ಶ್ಯಾನುಭೋಗರುಗಳು ಆ ಕ್ಷೇತ್ರದಲ್ಲಿ ಸಾಕಷ್ಟು ದುಡಿದು ಗಣನೀಯ ಸೇವೆ ಸಲ್ಲಿಸಿದ್ದಾರೆ. ಅನಾಮಿಕ ಪತ್ರಗಳ ಇತಿಹಾಸವನ್ನು ಬರೆಯುವವರು ಮೂಗರ್ಜಿಗಳ ಪ್ರಭಾವವನ್ನು ಉಲ್ಲೇಖಿಸದೆ ಇರಲು ಸಾಧ್ಯವೇ ಇಲ್ಲ. ರಾಜಕೀಯ, ಆರ್ಥಿಕ ಹಾಗೂ ಸಾಮಾಜಿಕ ಕ್ಷೇತ್ರಗಳಲ್ಲಿ ವಿಚಾರ ಕ್ರಾಂತಿಯು ನಡೆದು ಹೊಸ ಹೊಸ ಸಿದ್ಧಾಂತಗಳು ಬೆಳೆದು ಬಂದ ದಾರಿಯಲ್ಲಿ ಅನಾಮಿಕ ಪತ್ರಗಳ ವ್ಯಾಪ್ತಿ, ಉದ್ದೇಶ, ಹಾಗೂ ಬಳಕೆಯಲ್ಲಿ ವೈವಿಧ್ಯತೆಯು ಕಾಣುತ್ತಿರುವುದು ಪ್ರಗತಿಯ ಲಕ್ಷಣ. ಸಾಮಾಜಿಕ ಅಪರಾಧಗಳು ಈಗ ಹೆಚ್ಚುತ್ತಿರುವುದರಿಂದ ಅನಾಮಿಕ ಪತ್ರಗಳಿಗೆ ಶುಕ್ರ ದೆಸೆ ಬಂದಿದೆ. ಸುಂಕದ ಇಲಾಖೆಯವರೂ, ಗುಪ್ತ ವಿಚಾರಣೆ ದಳದ ಮುಖ್ಯಸ್ಥರೂ ಮಾಹಿತಿಗಳನ್ನು ಸಂಗ್ರಹಿಸುವುದು ಅವರಿಗೆ ಬರುವ ಅನಾಮಿಕ ಪತ್ರಗಳಿಂದಲೆ. ಪೋಲಿಸ್ ಇಲಾಖೆಗಂತೂ ಹುಸಿ ಬಾಂಬುಗಳ ಎಚ್ಚರಿಕೆ ಸುದ್ದಿಗಳು ಅನಾಮಿಕ ಪತ್ರಗಳಿಂದ ಬರುತ್ತಲೇ ಇರುತ್ತದೆ. ಪೋಲಿಸ್ ನಾಯಿಗಳು ಬಂದು ಕಛೇರಿ ಫೈಲುಗಳನ್ನು ಮೂಸಿ ನೋಡಿ ಹೋಗುವವರೆಗೂ ಕೆಲಸಗಳೆಲ್ಲ ಸ್ಥಗಿತ! ಪ್ರಜೆಗಳ ರಕ್ಷಣೆಯ ಜವಾಬ್ದಾರಿಯನ್ನು ಹೊತ್ತ ಸರ್ಕಾರ ಅನಾಮಿಕ ಪತ್ರವೆಂದು ತಾತ್ಸಾರ ಮಾಡಿ ಸುಮ್ಮನೆ ಕೂರುವ ಹಾಗಿಲ್ಲ. ಅವುಗಳ ಸಂಖ್ಯೆ ಗಾತ್ರಗಳನ್ನು ನೋಡಿದರೆ ಒಬ್ಬ ಮಂತ್ರಿಗಾಗುವಷ್ಟು ಕೆಲಸ ಬಿದ್ದಿದೆ. ಈಗ ಎಲ್ಲೆಲ್ಲೂ ದೊಡ್ಡ ಗಾತ್ರದ ಮಂತ್ರಿ ಮಂಡಳಗಳು ರಚನೆಯಾಗುತ್ತಿವೆ. ಒಬ್ಬ ಮಂತ್ರಿಯನ್ನು 'ಮಿನಿಸ್ಟರ್ ಫಾರ್ ಅನಾನಮಸ್ ಲೆಟರ್ಸ್' ಎಂದು ಕರೆದು ಕೂರಿಸಿದರೆ ತಪ್ಪೇನು?

ಅನಾಮಿಕ ಪತ್ರಗಳು ಪರಿಶೀಲನೆಗೆ ಯೋಗ್ಯವಲ್ಲ, ಅದಕ್ಕೇನು ಬೆಲೆ ಎಂದು ಅಟ್ಟಹಾಸವನ್ನು ತೋರುವ ಮಹನೀಯರಿಗೆ ಈ ಮಾದರಿಯಲ್ಲಿ ಒಂದು ಅನಾಮಿಕ ಪತ್ರ ಬರೆದು ಪ್ರತಿಕ್ರಿಯೆ ನೋಡಿ:

''ಸ್ವಾಮಿ ಗೋಥಾವಾಲ ಫಕೀರಪ್ಪಜಿ,

ನಿಮ್ಮ ಇಂಡಸ್ಟ್ರಿ, ಫೈನಾನ್ಸ್ ಕಂಪನಿಗಳ ವ್ಯವಹಾರವೆಲ್ಲ ನಮಗೆ ಗೊತ್ತುಂಟು. ನೀನು ನಿನ್ನೆ ಸುಲ್ತಾನ್ ಪೇಟೆಯಿಂದ ಎರಡು ಸೀಳು ಕಾಯಿಗಳನ್ನು ತಂದಿದ್ದು, ಕ್ಲಬ್ಬಿನಲ್ಲಿ ಜ್ಞಾನ ತಪ್ಪಿ ಕೆಳಗೆ ಬಿದ್ದಿದ್ದೂ, ನಿಮ್ಮ ಕುಮಾರಿ ಶೋಭಾದೇವಿ ಮತ್ತು ಎನ್.ಆರ್.ಐ. ಬೀರ್‌ರಾಜ್ ನಡುವೆ ನಡೆಯುತ್ತಿರುವ ರಹಸ್ಯ ಪತ್ರ ವ್ಯವಹಾರಗಳೂ ನಮಗೆ ಗೊತ್ತುಂಟು. ನೀವು ಕಳೆದ ಹದಿನೈದು ದಿವಸಗಳಲ್ಲಿ ನೀವು ಎಷ್ಟು ಬಾರಿ ಡಿಲ್ಲಿಗೆ ಹೋಗಿ ಬಂದಿದ್ದೀರಿ ಎಂಬುದೂ ನಮಗೆ ಗೊತ್ತುಂಟು. ಯಾವ ಗಳಿಗೆಯಲ್ಲಿ ಬೇಕಾದರು ಸಿ.ಬಿ.ಐ. ನಿಮ್ಮ ಮನೆಯ ಮೇಲೆ ಧಾಳಿ ನಡೆಸಬಹುದು. ನಾವು ನಿಮಗೆ ಯಾವ ಬೆದರಿಕೆಯನ್ನೂ ಹಾಕುತ್ತಿಲ್ಲ. ನಾವು ಯಾವ ಪ್ರತಿಫಲವನ್ನೂ ನಿಮ್ಮಿಂದ ನಿರೀಕ್ಷಿಸುವುದಿಲ್ಲ. ಈ ಕೂಡ ನಾಲ್ಕು ಫೋಟೋಗಳನ್ನೂ, ಒಂದು ವೀಡಿಯೋ ಟೇಪನ್ನೂ ಕಳಿಸಿರುತ್ತೇವೆ.'' ಈ ಅನಾಮಿಕ ಗೊತ್ತುಂಟು. ಪತ್ರವನ್ನು ಗೋಥಾವಾಲ ಓದಿದರೆ ಏಳು ದಿವಸ ಹಾಸಿಗೆ ಬಿಟ್ಟು ಏಳುವುದಿಲ್ಲ. ಇದು ಒಂದು ಸ್ಯಾಂಪಲ್ ಅಷ್ಟೆ.


ಅನಾಮಿಕ ಪತ್ರಗಳು ವೈವಿಧ್ಯಮಯ. ಅದನ್ನು ಬಳಸಿಕೊಳ್ಳುವುದರಲ್ಲಿದೆ ಚಾಕಚಕ್ಯತೆ. ನಮ್ಮ ಪಕ್ಕದ ಮನೆಗೆ ಈಗ್ಗೆ ಕೆಲವು ದಿವ್ಯಗಳ ಹಿಂದೆ ಅಂದರೆ ಪರೀಕ್ಷೆಗಳ ರಿಜಲ್ಟ್ ಬರುವ ಮುನ್ನ, ಇದ್ದಕ್ಕಿದ್ದಹಾಗೆ ಒಂದು ಅನಾಮಿಕ ಪತ್ರ ಬಂತು. ಹೀಗೆ:

''ರಾಯರೆ, ನೀವು ಮುಂಗೋಪಿಗಳೆಂದು ಕೇಳಿದ್ದೇವೆ. ಈಗಾಗಲೇ ಒಬ್ಬ ಮಗನನ್ನು ಕಳೆದುಕೊಂಡಿದ್ದೀರಿ. ನಿಮ್ಮ ಮಗ ಶ್ಯಾಮಿಯ ಚಲನವಲನಗಳನ್ನು ನಾವು ಸೂಕ್ಷ್ಮವಾಗಿ ಗಮನಿಸಿದ್ದೇವೆ. ಅವನು ತುಂಬ ಮೃದುಸ್ವಭಾವದವನು. ಅವನು ಮಾನಸಿಕ ವಿಕಾರಗಳಿಗೆ ತುತ್ತಾಗಿದ್ದಾನೆ. ಅವನು ಪರೀಕ್ಷೆಯಲ್ಲಿ ಫೈಲ್ ಆದನೆಂದು ನೀವು ಅವನನ್ನು ಬೈದು, ಹೀಯಾಳಿಸಿ ಅವಮಾನ ಮಾಡಿದರೆ ಅವನು ಆತ್ಮಹತ್ಯೆ ಮಾಡಿಕೊಳ್ಳುವುದು ಖಚಿತ. ಆಮೇಲೆ ನಿಮಗೆ ಸಿಗುವುದು ಅವನ ಶವ''

ಈ ಅನಾಮಿಕ ಕಾಗದವನ್ನು ಓದಿ ರಾಯರು ಕುಗ್ಗಿಹೋದರು. ರಿಜಲ್ಟ್‌ಬಂತು, ಶ್ಯಾಮಿ ಫೈಲ್ ಆಗಿದ್ದ. ರಾಯರು ಮಗನನ್ನು ತಬ್ಬಿಕೊಂಡು ನೇವರಿಸುತ್ತ ''ಹೋದ್ರೆ, ಹೋಯ್ತು, ಬಿಡೋ, ಅದೇನು ಮಹಾ! ಹಾಳು ಕಂಪ್ಯೂಟರುಗಳು ರಿಜಲ್ಟ್‌ನೆಲ್ಲ ತಪ್ಪು ತಪ್ಪು ಮಾಡುತ್ತೆ. ಹೋಗಿ ದೋಸೆ ತಿಂದು ಟಿವೀಲಿ 'ಮುಖಾಬುಲ' ಬರ್‍ತಾ ಇದೆ, ನೋಡು'' ಎಂದು ಹೇಳಿದ್ದು ನನಗೆ

ಕೇಳಿಸಿತು. ಆತ್ಮಹತ್ಯೆ ತಪ್ಪಿತಲ್ಲ ಅಂತ ನನಗೂ ಸಮಾಧಾನವಾಯ್ತು. ಆಮೇಲೆ ವಿಚಾರಿಸಿದಾಗ ಅವನ ಕ್ಲೋಸ್ ಫ್ರೆಂಡ್ ರಾಮಿಗೂ ಪರೀಕ್ಷೆಯಲ್ಲಿ ಡುಂಕಿ ಆಗಿತ್ತು. ಅವನಪ್ಪನಿಗೂ ಇಂಥದೇ ಒಂದು ಕಾಗದ ಬಂದಿತ್ತೆಂದು ನನಗೆ ಆಮೇಲೆ ತಿಳಿಯಿತು.

ಅನಾಮಿಕ ಕಾಗದಗಳು ಬಂದರೆ ಸಿಟ್ಟಾಗಬೇಡಿ. ತಾತ್ಸಾರದಿಂದ ಅವನ್ನು ಕಸದ ಬುಟ್ಟಿಗೆ ಬಿಸಾಡಬೇಡಿ. ನಿಧಾನವಾಗಿ ಓದಿ. ಆಗುಂಟಾಗುವ ಸಸ್ಪೆನ್ಸ್, ಥ್ರಿಲ್ ಯಾವ ಮನರಂಜನೆಯ ಛಾನಲ್‌ನಲ್ಲೂ ಸಿಗಲಾರದು. ಅನಾಮಿಕ ಪತ್ರಗಳನ್ನು ಲಾಭದಾಯಕವಾಗಿ ಬಳಸಿಕೊಳ್ಳಲು ಬೇಕಾಗುವ ತಂತ್ರಜ್ಞಾನ, ಯಂತ್ರಕೌಶಲ್ಯ ಇನ್ನೂ ಬೆಳೆಯಬೇಕಾಗಿದೆ. ಜನಗಳಿಗೆ ಮಾರ್ಗದರ್ಶನ ನೀಡುವ ಅಗತ್ಯವಿದೆ. ನನ್ನದೊಂದು ಸಣ್ಣ ವಿನಂತಿ. ನೀವು ಸ್ವೀಕರಿಸುವ ಅನಾಮಿಕ ಪತ್ರಗಳನ್ನು ಸಾಧ್ಯವಾದರೆ ನನಗೆ ಕಳಿಸಿಕೊಡಿ. ಆದರೆ ಒಂದು ಕಂಡೀಷನ್, ಸ್ಟಾಂಪು ಹಚ್ಚಿರಬೇಕು. ನಾನು ಅವುಗಳನ್ನು ಸಂಗ್ರಹಿಸಿ ಒಂದು ಅನಾಮಿಕ ಪತ್ರ ಗುಚ್ಛವನ್ನು ಪ್ರಕಟಿಸುತ್ತೇನೆ. ನಿಮ್ಮ ದೃಷ್ಟಿಯಲ್ಲಿ ನಾನೊಬ್ಬ ಅನಾಮಿಕನೆನಿಸಿದರೂ ಚಿಂತೆಯಿಲ್ಲ. ಯಾಕೆಂದರೆ ಆ ಪುಸ್ತಕವನ್ನು ಮಾರಿ ಬಂದ ಹಣದಿಂದ ನನ್ನ ಕಿರು ಬೆರಳಿನ ಪಕ್ಕದ ಬೆರಳಿಗೆ ವಜ್ರದ ಹರಳಿನ ಉಂಗುರ ತೊಡಿಸುತ್ತೇನೆ.



"ಚಿನ್ನದಂಥಾ ಅಳಿಯಾರೀ, ಪ್ರಿಯಾಂಕಾನ ಬಿಟ್ಟುಕೊಟ್ಟಿದಾನಲ್ಲಾ"

ಅಬ್ಬೆಯ ಮರೆವು

– ಚಂಚಲಾ ಶ್ರೀಕಂಠಯ್ಯ

'ಸಾವಿಲ್ಲದ ಮನೆಯಿಲ್ಲ'ದಂತೆ ಮರೆವಿಲ್ಲದ ವ್ಯಕ್ತಿ ಇಲ್ಲ ಈ ಜಗದಲ್ಲಿ. ಸತ್ತವರನ್ನು ಮರೆಯುತ್ತೇವೆ ಆದರೆ ಮರೆವಿನ ಚಾಳಿಯನ್ನು ಮರೆಯದೆ ಬದುಕಿನಲ್ಲಿ ಅನುಷ್ಠಾನಿಸುತ್ತಿರುತ್ತೇವೆ. ವ್ಯಕ್ತಿಗೂ ಮರೆವಿಗೂ ಅವಿನಾಭಾವ ಸಂಬಂಧ - ಇದರ ಕಾರ್ಯಸ್ಥಾನ ಮೆದುಳಿನಲ್ಲಾದರೂ... ಪರಿಣಾಮ ಮಾತ್ರ ಹೃದಯದ ಮೇಲೆ ಅನೇಕ ವಿಶೇಷಣ ಮತ್ತು ಗುಣವಾಚಕಗಳಿಂದ ಕರೆಸಿಕೊಳ್ಳುವ ಮರೆವಿನಿಂದ ಎಲ್ಲರೂ ಭಾದಿತರೂ, ಬಂಧಿತರು - ಇಷ್ಟೆಲ್ಲಾ ಹೇಳಿದ್ದು ಹೌದು. ಮರೆವು ಎಂದಾಕ್ಷಣ ಮರೆಯದೇ - ನೆನಪಾಗುವುದು - ನಾವು ಕಂಡು ಕೇಳಿದ ಅಬ್ಬೆಯ ಅಗಾಧ ಮರೆಗುಳಿತನದಿಂದಾದ ಪ್ರಸಂಗಗಳು-

ನಮ್ಮ ಅಬ್ಬೆ ಒಮ್ಮೊಮ್ಮೆ ತನ್ನನ್ನು ತಾನೇ ಮರೆತು ''ನಾನು ಯಾರು?'' ಎಂದು ದೊಡ್ಡ ತತ್ವಜ್ಞಾನಿಯಂತೆ ಪ್ರಶ್ನಿಸಿಕೊಂಡಾಗ, ಅಪ್ಪಯ್ಯ ''ಈ (ಅ) ಜ್ಞಾನಿಯನ್ನ ಮನೋ ವೈದ್ಯದಲ್ಲಿ ಕರೆದುಕೊಂಡು ಹೋಗ್ರೋ. ಮಕ್ಕಳಾ''... ಎಂದರೆ, ಮಾತು ಕೇಳಿಸಿಕೊಂಡ ಮೊಮ್ಮಕ್ಕಳ ನಗು ಮನೆಯಿಂದಾಚೆಯೂ ಹಬ್ಬುವುದು... ಅಪ್ಪಯ್ಯ ಸಂದರ್ಭವನ್ನು ಹತೋಟಿಗೆ ತರುತ್ತಾ ''ಏಯ್, ಸ್ವಲ್ಪ ಮೆಲ್ಲಗೆ ನಗ್ರೋ, ನಮ್ದು ಬಿ.ಡಿ. ಎ. ಸರ್ಕಾರದ ಮನೆ... ಮನೆ ಜಖಂ ಆದರೆ ಕಷ್ಟ'' ಎಂದು ನಗುವಿನಲ್ಲಿ ಪಾಲ್ಗೊಳ್ಳೋದು ಮರೆಯುತ್ತಿರಲಿಲ್ಲ. ಅಬ್ಬೆಗೆ ಮರೆವಿನೊಂದು ಕಾಯಿಲೆ ಬಿಟ್ಟರೆ... ಆಕೆಯಂಥ ಹೆಂಗ್ಸು ಈ ಧರೆಯಲ್ಲೇ ಯಾರೂ ಇಲ್ಲವೇನೋ ಅನ್ನುವಷ್ಟು... ಸಂಭಾವಿತೆ. ಅಂತೆಯೆ ಅಬ್ಬೆ ಅಪ್ಪಯ್ಯನ ಅಚ್ಚು ಮೆಚ್ಚಿನ ಕಾಂತೆ ಎನ್ನಿ! ಈ ಮರೆವಿನಿಂದ ಎಂಥೆಂಥ ಸಂಕಷ್ಟ ಸಂಭವಿಸಿದರು ಅದು ಖುಲಾಸ್... ಅಪ್ಪಯ್ಯನ ಪ್ರೀತಿಯ ಮುಂದೆ...; ಒಬ್ಬರನ್ನೊಬ್ಬರೂ ಬಿಟ್ಟಿರದಷ್ಟು ಬಿಗಿ ಬಾಂಧವ್ಯ ಇತ್ತು, ಈ ಮುಸ್ಸಂಜೆಯ ದಂಪತಿಗಳಲ್ಲಿ!!!

ಅಬ್ಬೆ ಒಂದು ಕೈಯಲ್ಲಿ ತೊಗರಿ ಬೇಳೆ ಇನ್ನೊಂದರಲ್ಲಿ ಕಡಲೇಬೇಳು ಇಟ್ಟುಕೊಂಡು ಯಾವುದು... ಯಾವ ಬೇಳೆಂತ ಯೋಚಿಸುತ್ತಾ ನಿಂತರೆ... ಅಪ್ಪಯ್ಯ ಅಂದಿನ ಅಡಿಗೆಯ ಮುಂ ಸೂಚನೆ ಮೊದಲೇ ಊಹಿಸಿ ''ಇವತ್ತು ನಮ್ಮ ಮನೆಯ ಅಡಿಗೆ ಬಹಳ ಸ್ಪೆಷಲ್ ಆಗಿ ಪೊಗದಸ್ತಾಗಿರುತ್ತೆ'' ಅಂತ ಹೇಳಿ,

ಆ ದಿನ ಮಾಡಬೇಕಾದ ಊಟಕ್ಕೆ ಮಾನಸಿಕ ಸಿದ್ಧತೆ ಮಾಡಿಕೊಳ್ಳುತ್ತಿದ್ದರು.... ಅದರಂತೆ ಅಬ್ಬೆ ತನ್ನ ಪಾಕ ನೈಪುಣ್ಯತೆಯಲ್ಲಿ ಮರೆಗುಳಿತನ ಪ್ರಯೋಗಿಸಿ ಎಲ್ಲರಿಂದ ಬೈಸಿಕೊಂಡಿದ್ದಾಳೆ... ನಗಿಸಿದ್ದಾಳೆ.... ವೈವಿಧ್ಯತೆ ಪ್ರದರ್ಶಿಸಿದ್ದಾಳೆ. ಈ ಮರೆವಿನಿಂದಾಗಿ ಅಬ್ಬೆಗೆ ಅಂತರಂಗದ ಗೆಳತಿಯರು ಬಹಳ. ಒಬ್ಬರಲ್ಲಾ ಒಬ್ಬರು ಇವಳ ಕಿವಿಯಲ್ಲಿ ಕುಟುಂಬದ ಸುಖ-ದುಃಖಗಳನ್ನು ತುಂಬುವವರೇ... ''ಲೇ ವೆಂಕಿ. ನಿನ್ನ ಹತ್ತಿರ ಕುಟುಂಬದ ವಿಷಯಗಳನ್ನು ಹೇಳಿದರೆ ಒಂದು ಸಮಾಧಾನ ಸಿಗುತ್ತೆ.. ಅದು ಬೇರೆ ಕಿವಿಗಳನ್ನ ದಾಟುವುದಿಲ್ಲ ಅನ್ನೊ ನಂಬಿಕೆ ಇದೆ. ನಿನ್ನಲ್ಲಿ ಹೇಳಿದ ವಿಷಯಗಳು ಬಾವಿಯೊಳಗೆಸೆದ ಕಲ್ಲಿನಂತೆ ಮನದಾಳದೊಳಗೆ ಸೇರುತ್ತೆ'' ಅನ್ನುವರು. ಪಾಪ! ಅವರಿಗೇನು ಗೊತ್ತು... ಅಬ್ಬೆ ತನಗೆ ಸಂಬಂಧಿಸದಿದ್ದ ಸುದ್ದಿ ಸಮಾಚಾರಗಳನ್ನು ಮರೆವಿನ ಬಾವಿಗೆಸೆಯುವಳೆಂದು...

ಹೊರ ಹೋಗಿದ್ದ ಅಬ್ಬೆ ಹಿಂತಿರುವುಗುವುದು ಸ್ವಲ್ಪ ತಡವಾದರೆ ''ಅಪ್ಪಯ್ಯ ಹೋಗ್ರೋ... ನೋಡಿಕೊಂಡು ಬನ್ರೋ ವೆಂಕಿನಾ... ಎಲ್ಲಾದರೂ ಮನೆ ದಾರಿ ಮರೆತು... ದಾರಿ ತಪ್ಪಿಸಿಕೊಂಡುಬಿಟ್ಟಿದ್ದಾಳು'' ಎಂದು ಲಘುವಾಗಿ ಹೇಳಿ ಮಕ್ಕಳನ್ನು ಅಬ್ಬೆಯ ಹಿಂದೆ ಅಟ್ಟುತ್ತಿದ್ದರು. ಮರೆವಿನಿಂದಾಗಿ ಅವರಿಬ್ಬರ ಬಾಂಧವ್ಯ ಘನೀಭೂತವಾಗುತ್ತಿತ್ತು. ''ಅಬ್ಬೇ... ಅಪ್ಪಯ್ಯನ್ನ ಗಮನ-ಪ್ರೀತಿ ನಿನ್ನ ಕಡೆಗೇ ಇರಬೇಕೂಂತಲೇ... ನೀನು ಮರೆವಿನ ಕವಚ ಧರಿಸುತ್ತೀಯೆ'' ಎಂದು...

ಅಬ್ಬೆ ಜೊತೆ ಇಂಥಾ ಮಧುರ ಬಾಂಧವ್ಯ ಹೊಂದಿದ್ದ ಅಪ್ಪಯ್ಯ ನೆಲಕಚ್ಚಿದರು. ನೆಲದ ಋಣ ತೀರುವ ಸಮಯ ಸನ್ನಿಹಿತವೆಂದು ಅಬ್ಬೆಯನ್ನು ಕರೆದು, ಕೆಂಪು ಟೇಪು ಬಿಗಿದ ಕಾಗದ ಸುರಳಿಯೊಂದನ್ನು ಕೈಗಿತ್ತು ''ನೋಡು ವೆಂಕೂ, ಇದನ್ನ ಜೋಪಾನವಾಗಿ ಎತ್ತಿಡು... ನಿನಗೆ ಮರೆವು ಜಾಸ್ತಿ.... ಇದು ನನ್ನ ಮರಣದ ಉಯಿಲು ಪತ್ರ... ನಾನು ಯಾರಿಗೂ ಅನ್ಯಾಯವಾಗದಂತೆ ಎಲ್ಲಾ ಗಂಡು, ಹೆಣ್ಣು ಮಕ್ಕಳಿಗೂ ಸಮನಾಗಿ ನನ್ನಲ್ಲಿದ್ದ ಆಸ್ತಿಯನ್ನ ಹಂಚಿದ್ದೇನೆ... ಅದರಂತೆ ನಡೆದರೆ ನನ್ನ ಆತ್ಮಕ್ಕೆ ಶಾಂತಿ ಸಿಕ್ಕುತ್ತೆ. ಉಯಿಲು ಜೋಪಾನವಾಗಿ ಎತ್ತಿಡು... ಜೋಪಾನ... ಜೋಪಾನ'' ಎಂದು ಹೇಳು ಹೇಳುತ್ತ ವಿಸ್ಮೃತಿಗೆ ಜಾರಿದರು. ಅರೆ ಬರೆ ಜ್ಞಾನದಲ್ಲೂ ಜೋಪಾನದ್ದೆ ಮಂತ್ರ... ಈ ಮೂರು ಶಬ್ದ ಉಚ್ಚರಿಸಿ ಉಚ್ಚರಿಸಿ ನಾಲಿಗೆ ಸೋತು... ಕಡೆ 'ಪಾನ'ಕ್ಕೆ ವಾಲಿತು. ಪಾನ... ಪಾನ ಎಂದ ಅಪ್ಪಯ್ಯನ ಬಾಯಿಗೆ ಓಡಿ ಹೋಗಿ ಪಕ್ಕದ ಮನೆಯವರಲ್ಲಿ - ಗಂಗೆ ತಾಲಿ ಎರವಲು ತಂದು ಗಂಗೆಯನ್ನು ಹಾಕಿದರು

ಮಕ್ಕಳು. ಊಹೂಂ ಗಂಟಲು ಒದ್ದೆಯೇ ಆಗಲಿಲ್ಲವೆಂಬಂತೆ ಮತ್ತೆ ಪಾನದ್ದೇ ಜಪವಾಗಿ... ಕಡೆ.. ಕಡೆಗೆ 'ಪಾ'ನೂ ಬಿಟ್ಟು 'ನ' ಗೆ ನಿಂತು. ಅದೂ ಅಳಿದು ಅಪ್ಪಯ್ಯನ ಚೇತನ ಆಚೆ ಕ್ಷಿತಜಕ್ಕೆ ನೆಗೆಯಿತು.

ಅಬ್ಬೆಯ ಮರೆವು ಮಾತ್ರ ಅಪ್ಪಯ್ಯನ ಮಂತ್ರ ಜಪಕ್ಕೆ ಮಣಿಯಲಿಲ್ಲ. ಜೋಪಾನವಾಗಿ ಉಯಿಲನ್ನು ಎಲ್ಲಿಯೋ ಇಟ್ಟು.. ಮರತೇ ಮರೆತಳು... ಮರೆವಿನ ಬಾವಿಯೊಳಗೆಸೆದು ನಿಶ್ಚಿಂತಳಾದಳು. ಇಂಥ ಸಮಯಕ್ಕಲ್ಲವೇ ಬಂದು ಬಾಂಧವರು ನೆರವಿನ ಹಸ್ತ ಚಾಚುವುದು. ಅಂತೆಯೇ ಬಂದರು. ಹುಡುಕಿದರು. ಊಹೂಂ... ಸಿಕ್ಕಲಿಲ್ಲ ದಕ್ಕಲಿಲ್ಲ. ಬಾವಿಗೆಸೆದದ್ದು ಅಷ್ಟು ಸುಲಭವಾಗಿ ದಕ್ಕುವುದೇ... ದಂಡೆಯ ಮೇಲೆ ನಿಂತರೆ... ಬಾವಿಗಿಳಿಯುವ ಧೈರ್ಯ ಯಾರಿಗೂ ಇರಲಿಲ್ಲ... ಕಡೆಗೂ ಮರೆವಿನ ಪ್ರತಿವಾದಿ ನೆನಪು ಅಬ್ಬೆಯೊಂದಿಗೆ ಸಹಕರಿಸಲಿಲ್ಲ.

ಪಕ್ಷಗಳು - ಪ್ರತಿಪಕ್ಷ ಹುಟ್ಟಿಕೊಂಡವು

ಸಂಚು ಮಾಡಿದವು...

ಬೊಬ್ಬಿಟ್ಟವು.. ಕೊಚ್ಚಿದವು.

ಈ ದೊಂಬರಾಟದ ಸದ್ದು ಸಂಧಾನ ವಿಕ್ರಮ ಕೃಷ್ಣಪರಮಾತ್ಮನಿಗೆ ಕೇಳಿಸಿತೊ... ಅಥವಾ ಅಬ್ಬೆಯ ಪ್ರಾರ್ಥನೆಗೆ ಮಣಿದೊ ಅಂತೂ ಪರಮಾತ್ಮ ನ್ಯಾಯದೇವತೆಯ ಪಾತ್ರಧರಿಸಿದ. ಅಂದು ಪರಮಾತ್ಮ ನ್ಯಾಯದ ಪಕ್ಷವಾದ ಪಾಂಡುಪಕ್ಷ ವಹಿಸಿದ್ದ... ಇಂದು???

ಮರ್ಯಾದಸ್ಥ ಮನೆತನದವರು ನ್ಯಾಯಕ್ಕಾಗಿ ಕಾನೂನು ಮೊರೆ ಹೋಗುವುದು ಮೈಲಿಗೆ ಎಂಬ ದಿವ್ಯ ಕಲ್ಪನೆಯ ಫಲಶೃತಿ ಛಾವಡಿಯಲ್ಲಿ ಸೌಹಾರ್ಧಯುತ ಒಮ್ಮತಕ್ಕೆ ಬರಲು ಅಂಕಿತ ಬಿತ್ತು... ಮರೆತಿಟ್ಟ ಉಯಿಲು ಪತ್ತೆಯಾಗಲು ಅಸಮರ್ಥವಾದ ಕಾರಣ ಸಮಸ್ಯೆ ಬಲು ಸುಲಭದಲ್ಲಿ ಪರಿಹಾರ ಕಂಡಿತು.

ಅಪ್ಪಯ್ಯ ಉಯಿಲೇ ಮಾಡಿರಲಿಲ್ಲ!!! (ಕಡೆವರೆಗೂ) ಉಯಿಲು ಮಾಡಲು ಮರೆತರೆಂದು ಚಾಲಾಕಿ ನ್ಯಾಯಮೂರ್ತಿಗಳು ಘೋಷಿಸಿ... ನ್ಯಾಯ ದೊರಕಿಸಿದರು. ಉಯಿಲಿಗೊಂದು ಮುಕ್ತಿ ಕರುಣಿಸಿದರು... ನೋಟರಿಯ ಕಣ್ಣೆದುರಿಗೇ...!!

ಫಲ- ಸಿಕ್ಕಿದ್ದೇ ನೀರುಂಡೆ ಎಲ್ಲರಿಗೂ...

ಪಾಪ! ಅಪ್ಪಯ್ಯನ ಆತ್ಮ ಅದೆಷ್ಟು ಸಂಕಟ ಪಟ್ಟಿತೋ... ಭೂಲೋಕದ ನ್ಯಾಯವ ಕಂಡು... ಉರುಳುರುಳಿ ಪರಮಾತ್ಮನಿಗೆ ಉರುಳ ಸೇವೆ ಸಲ್ಲಿಸಿ 'ದೇವ, ವೆಂಕಿಗಿಷ್ಟು ನೆನಪಿನ ದಿವ್ಯ ಶಕ್ತಿ ಕರುಣಿಸು... ಇಲ್ಲದಿದ್ದರೆ.... ಸಮಾನತೆ ಕುಸಿದು ಬೀಳುತ್ತೆ'' ಎಂದು ಅಲವತ್ತುಕೊಂಡಿರಬಹುದೇನೋ...

ಉಪ ಸಂಹಾರ:

''ಸರ್ವಾಂತರ್ಯಾಮಿ, ನನ್ನ ಈಗಲೇ ಧರೆಗಿಳಿಸು ಕೆಲವು ಕ್ಷಣ. ನನಗೆ ಗೊತ್ತು ನನ್ನ ಕಾಂತಾಮಣಿ ಮರೆತಿಟ್ಟಿರುವ ಉಯಿಲು ಪತ್ರ ಎಲ್ಲಿದೆಯೆಂದು... ನಾನು ತೋರಿಸುತ್ತೇನವಳಿಗೆ, ಅಯ್ಯೋ.... ಈಗ ಆಗುತ್ತಿರುವ ಅಪಮಾನ ಸಹಿಸಲಾರೆ ದೇಹವನ್ನ ಎಂದೋ ಸುಟ್ಟವರು... ನಾ ಉಳಿಸಿದ್ದ ನನ್ನ ವ್ಯಕ್ತಿತ್ವವನ್ನು ಸುಟ್ಟರಲ್ಲಾ... ಎಂದು ಅಪ್ಪಯ್ಯ ಕನಮತ್ತಿದ್ದಾನೆಂದು ಅಬ್ಬೆಯ ಮಗಳು ಸಮಾನತಾವಾದಿ ಸುರುವೆಗೆ ನಿತ್ಯ ಬೀಳುವ ನಿಶಿಯ ಕನಸಂತೆ!!!

ವಿಡಂಬನೆ

ಕೆಲವು ದಿನಗಳ ಹಿಂದೆ ತಾರ ತನ್ನ ಚೊಚ್ಚಲ ಕೃತಿಯನ್ನು ಬಹು ವಿಜೃಂಭಣೆಯಿಂದ ಬಿಡುಗಡೆಗೊಳಿಸಿದಳು. ಅವಳ ಮಿತ್ರಕೂಟವೇ ಅಲ್ಲಿ ನೆರೆದಿತ್ತು. ಆತ್ಮೀಯರೆಲ್ಲಾ ಅವಳಿಗೆ ಶುಭಾಷಯ ಕೋರಿ ಸಾಹಿತ್ಯ ಕೃಷಿ ಅವ್ಯಹತವಾಗಿ ನಡೆಯಲೆಂದು ಹಾರೈಸುವ ಮಂದಿಯ ಜಾತ್ರೆ ನೆರೆದಿತ್ತು. ಅಲ್ಲಿಯ ಒಂದು ಜಳಕ್....

''ಮೇಡಂ ಶುಭಾಷಯಗಳು'' ಎಂದು ಹಾರೈಸಿದವರೊಬ್ಬರು ಅವಳ ಕಿವಿಯ ಹತ್ತಿರ ಬಂದು ಮೆಲ್ಲನೆ ''ನೀವು ಚೊಚ್ಚಲ ಹೆರಿಗೆಯನ್ನು ಒಬ್ಬನೇ ಮಗನಿಗೆಸಾಕುಮಾಡಿದ್ದೀರಿ... ಆದರೆ ನಿಮ್ಮ ಚೊಚ್ಚಲ ಕೃತಿಯ ನಂತರ ಬರುವ ಕೃತಿಗಳು ಈ ಹಾದಿಯನ್ನು ಹಿಡಿಯದಿರಲಿ. ನಿಮ್ಮ ಬರಹದ ಕೃಷಿ ಚೊಚ್ಚಲಿಗೆ ನಿಲ್ಲದಿರಲಿ'' ಎಂದು ಉಪದೇಶಿಸಿದರು.

ತಾರ ಸುಸ್ತೋ... ಸುಸ್ತು!!!...

ಯಾಕೆಂದರೆ ಅವಳು ತನ್ನ ಪ್ರಸ್ತಾವಿಕ ಭಾಷಣವನ್ನು ಬಹು ಹುರುಪಿನಿಂದ ಮಾಡಿದ್ದಳು.....

''ನನ್ನ ಬದುಕು... ಬರಹ ಒಂದೇ'' ಎಂದು!!!

- ಚಂಚಲಾ ಶ್ರೀಕಂಠಯ್ಯ

..... ಧಾಳಿ!

– ಎಚ್. ಗೋಪಾಲಕೃಷ್ಣ

ಕೆ.ಇ.ಬಿ.ಯ ವೈನ್‌ಮೆನ್ನು, ಬಿಲ್‌ರೈಟರು, ಎಂಜನಿಯರುಗಳು ಶಿರಸ್ತೇದಾರರ ಕಛೇರಿಗಳಲ್ಲಿನ ಕಂಬಗಳು, ಬಿ.ಡಿ.ಎ.ನಲ್ಲಿನ ಕಿಟಕಿಗಳು ಇಂತಹವುಗಳ ಮೇಲೆ ನಮ್ಮ ಲೋಕಾಯುಕ್ತದವರು ಧಾಳಿ ನಡೆಸಿ ಧಾಳಿಯ ವಿವರಗಳನ್ನ ಪತ್ರಿಕೆಗಳಲ್ಲಿ ಪ್ರತಿ ದಿವಸ ನೀಡುತ್ತಿರುವುದನ್ನು ನೀವು ಓದುತ್ತಲೇ ಬಂದಿದೀರಿ ಅಲ್ಲವೇ?

ಕಳೆದ ವಾರ 'ಫಾರ್ ಎ ಛೇಂಜ್' ಲೋಕಾಯುಕ್ತದವರು ಕನ್ನಡದ ಹಾಸ್ಯಸಾಹಿತಿ ಮನೆ ಮೇಲೆ ಧಾಳಿ ನಡೆಸಿಬಿಟ್ಟರು. ಅದರ ವಿವರಗಳನ್ನ ಲೋಕಾಯುಕ್ತದವರು ಇನ್ನೂ ಯಾಕೋ ಪತ್ರಿಕೆಗಳವರಿಗೆ ತಿಳಿಸಿಲ್ಲ. ಆ ಧಾಳಿ ವಿವರ ಹೇಗಿದೆ ಗೊತ್ತೇ? ''... ನಗರದಿಂದ ನೂರು ಮೈಲಿ ಆಚೆ ಕಟ್ಟಿಕೊಂಡಿರುವ ಸ್ವಂತ ಮನೆ ಮೇಲೆ ನಾವು ಆರುಜನ ಸಿಬ್ಬಂದಿ ಧಾಳಿ ನಡೆಸಿದೆವು. ಮನೆಯ ಹಾಲಿನಲ್ಲಿ ಒಂದು ಆರು ಇಂಚು ಹನ್ನೆರಡು ಅಡಿ ಅಳತೆಯ ಒಂದೂವರೆ ಆಳದ ಗೋಡೆಯಲ್ಲಿಯೇ ಅಳವಡಿಸಿದ ಷೋಕೇಸು ಮನೆ ಒಳಹೊಕ್ಕಕೂಡಲೇ ಕಾಣಿಸಿತು. ಷೋಕೇಸಿನಲ್ಲಿ ಕಟ್ಟು ಹಾಕಲ್ಪಟ್ಟವು ಒಂದು ಪುಟದಷ್ಟು ಪ್ರಿಂಟೆಡ್ ಅಕ್ಷರಗಳು ತುಂಬಿದ್ದ ಆರು ಫೋಟೋಗಳು ಸಿಕ್ಕವು - ವಿವರವಾಗಿ ಪರೀಕ್ಷಿಸಿದಾಗ ಈ ಪತ್ರಗಳು ಸಾಹಿತಿಯ ಜೀವನ ಚರಿತ್ರೆಯ ಅಬ್ರಿಡ್ಜ್‌ಡ್ ವರ್ಷನ್‌ಗಳೆಂದೂ ಮತ್ತು ಈತನನ್ನು ಆಗಾಗ ಸನ್ಮಾನಿಸಿದ ಸಂಘ ಸಂಸ್ಥೆಗಳು ನೀಡಿದ ಸನ್ಮಾನ ಪತ್ರ ಎಂದೂ ತಿಳಿದು ಬಂದಿತು. ಅದೇ ಷೋಕೇಸಿನಲ್ಲಿ ಸುಮಾರು ಒಂದೂವರೆ ಡಜನ್ನಿನಷ್ಟು ಸ್ಮರಣ ಫಲಕ ಎಂಬ ಹೆಸರನ್ನ ಹೊತ್ತ ಹಿತ್ತಾಳೆ ತಗಡಿನ ಮೆಮೆಂಟೋಗಳು ಸಿಕ್ಕವು. ಅಂಗಡಿಯಲ್ಲಿ ಇವುಗಳ ಸದ್ಯದ ಬೆಲೆ ಕೆ.ಜಿ.ಗೆ ಎರಡು ರೂಪಾಯಿ ಎಂದು ನಮ್ಮ ಸಿಬ್ಬಂದಿಯಲ್ಲೊಬ್ಬರು ತಿಳಿಸಿದರು. ಅವರೂ ಸಹ ಸಾಹಿತ್ಯ ಪ್ರೇಮಿ. ಈ ಷೋಕೋಸಿನಲ್ಲಿ ದೊರೆತ ಮತ್ತೊಂದು ಡಬ್ಬದಲ್ಲಿ ತಲೆ ಬುಡ ಮತ್ತು ನಾಲಿಗೆ ಹಾಗೂ ಒಳ ಶರೀರ ಕಳೆದುಕೊಂಡ, ಅಸ್ತಿಪಂಜರ ಎನ್ನಬಹುದಾದ ಸುಮಾರು ನೂರ ಹನ್ನೆರಡು ಪೆನ್ನುಗಳು, ಬಾಲ್‌ಪೆನ್ನುಗಳು ಮತ್ತು ಅಸಂಖ್ಯಾತ ಮುಗಿದ, ಅರೆಮುಗಿದ ರೀಫಿಲ್‌ಗಳು ಸಿಕ್ಕಿವೆ. ಮಾರುಕಟ್ಟೆಯಲ್ಲಿ ಇದರ ಬೆಲೆ ಮೈನಸ್

ಮೂವತ್ತು ರೂಪಾಯಿಗಳಿರಬಹುದೆಂದು ನಮ್ಮ ಸಾಹಿತಿ ಸಿಬ್ಬಂದಿ ತಿಳಿಸಿದ್ದಾರೆ. ಹಾಲಿನಲ್ಲಿಯೇ ಷೋಕೇಸೂ ಸಹ ಇದ್ದು ಅದರಲ್ಲಿ ಸುಮಾರು ಇಪ್ಪತ್ತು ಜತೆ ಹಳೆಯ ಹರಿದ ವಿವಿಧ ಸೈಜಿನ ಷೂಗಳು, ಚಪ್ಪಲಿಗಳು ಸಿಕ್ಕಿವೆ. ಸಾಹಿತಿಗಳಿಗೆ ಅದೆಂತಹದೋ 'ಸೆಂಟಿಮೆಂಟ್' ಎಂಬ ವ್ಯಾಧಿ ಇರುವುದರಿಂದ ಅವರು ಹಳೆಯದನ್ನೂ ಬಿಸಾಡರು ಎಂದು ಸಾಹಿತಿ ಪತ್ನಿ ವ್ಯಗ್ರರಾಗಿ ನುಡಿದಿದ್ದಾರೆ.

"…. ಬಲ ಪಕ್ಕದ ರೂಮಿನ ಅಟ್ಟದ ಮೇಲೆ ಇಪ್ಪತ್ತಾರು ಇಂಚಿನ ಓನಿಡಾ ಟೀವಿ ಹೆಸರನ್ನು ಹೊತ್ತ ಹನ್ನೆರೆಡು ಪೆಟ್ಟಿಗೆಗಳು ರಟ್ಟಿನವು ಸಿಕ್ಕವು. ಆರೂ ಜನ ಸಿಬ್ಬಂದಿ ಅತಿ ಭಾರವಾದ ಈ ಪೆಟ್ಟಿಗೆಗಳನ್ನು ಕಷ್ಟಪಟ್ಟು ಕೆಳಕ್ಕೆ ಇಳಿಸಿದರು. ಒಂದೊಂದೂ ಪೆಟ್ಟಿಗೆ ತೆಗೆದ ಹಾಗೆ ನಮ್ಮ ಸಿಬ್ಬಂದಿಯಲ್ಲಿ ಎದೆನೋವು ಶುರು ಆಯಿತು. ಸೂಕ್ಷ್ಮವಾಗಿ ಗಮನಿಸಲಾಗಿ ಪೆಟ್ಟಿಗೆಯಲ್ಲಿ ದೊರೆತ ವಸ್ತುಗಳ ವಿವರ ಹೀಗಿದೆ. ಒಂದೊಂದು ಪೆಟ್ಟಿಗೆಯಲ್ಲೂ ವಿವಿಧ ಆಕಾರದ (ಇವುಗಳಿಗೆ ಕ್ರೇನು, ಡುಮ್ಮಿ ಡಬಲ್‌ಡುಮ್ಮಿ ಎಂದೇನೇನೋ ವಿವರಗಳನ್ನು ಸಾಹಿತಿ ನೀಡಿದರು) ಸುಮಾರು ಆರುನೂರು ಪುಸ್ತಕಗಳು ಇದ್ದವು. ಇವು ಸಾಹಿತಿಗಳು ಹಳೆಯ ಪುಸ್ತಕದ ಅಂಗಡಿಯಿಂದ, ಹೊಸ ಅಂಗಡಿಗಳಿಂದ, ಸ್ನೇಹಿತರಿಂದ ಮತ್ತು ಲೈಬ್ರರಿಗಳಿಂದ ಸಂಗ್ರಹಿಸಿದ್ದಂತೆ ನಮ್ಮ ಸಿಬ್ಬಂದಿ ಪರಕರ ಈ ಪುಸ್ತಕಗಳ ಬೆಲೆ 10 ಕೇಜಿಗೆ ಮೈನಸ್ ಅರವತ್ತು ರೂ.ಗಳಂತೆ. ಹೇಗಿದ್ದರೂ ಕೆಳಗೆ ಇಳಿಸಿದೀರಾ ಅದ್ಯಾವುದಾದರೂ ಕೇಸ್ ಬುಕ್ ಮಾಡಿ ಈ ಕಸ ನೀವೇ ತೆಗೆದುಕೊಂಡು ಹೊಗಿ ಎಂದು ಸಾಹಿತಿ ಪತ್ನಿ ಕೋರಿಕೆ ಸಲ್ಲಿಸಿದ್ದಾರೆ.

ಬಲ ಪಕ್ಕದ ಎರಡನೇ ರೂಮಿನಲ್ಲಿ ರಮ್ಮು ವಿಸ್ಕಿ ಬೀರು ಮೊದಲಾದ ಪಾನೀಯಗಳ ಹೆಸರು ಹೊತ್ತ ರಟ್ಟಿನ ಪೆಟ್ಟಿಗೆಗಳನ್ನು ಕಂಡು ನಮ್ಮ ಸಿಬ್ಬಂದಿ ಆಸೆಯಿಂದ ಅದನ್ನು ಕೆಳಗಿಳಿಸಿದರು. ಸುಮಾರು ಒಂದು ಡಜನ್ನಿನಷ್ಟು ಪೆಟ್ಟಿಗೆಗಳು ಸಿಕ್ಕವು. ಪೆಟ್ಟಿಗೆಯನ್ನು ಕುತೂಹಲದಿಂದ ತೆಗೆದರೆ ಅದೇನು ಸಿಕ್ಕಿತು ಅಂತೀರೀ? ಸ್ವತಃ ಸಾಹಿತಿಯೇ ಅಚ್ಚು ಹಾಕಿಸಿದ ಆತನದೇ ಪುಸ್ತಕಗಳು ಕಳೆದ ಹತ್ತು ವರ್ಷಗಳಲ್ಲಿ ಪ್ರಿಂಟಾದವು. ಸುಮಾರು ಎಂಟು ಸಾವಿರ ಪುಸ್ತಕಗಳು ಬೇರೆ ಬೇರೆ ಎಂಟು ಶೀರ್ಷಿಕೆಯವು! ಇದರ ಬೆಲೆ ಸಹ 100 ಕೇಜಿಗೆ ಮೈನಸ್ ಸಾವಿರ ಎಂದು ನಮ್ಮ ಸಿಬ್ಬಂದಿ ಹೇಳಿಕೆ. ಮೈನಸ್‌ಬೆಲೆ ಅಂದರೇನು ಅಂದರೆ ಪುಸ್ತಕ ಸಾಗಹಾಕುವಾಗ ಅದರ ಸಂಗಡ ಇಷ್ಟು ಹಣವನ್ನು ತೆಗೆದುಕೊಳ್ಳುವಾತನಿಗೆ ನೀಡುವುದು!

‘‘.... ಸಾಹಿತಿಗಳ ಬಚ್ಚಲಮನೆ ಅಟ್ಟ ಬಹಳ ದೊಡ್ಡದಿದ್ದು ಅದರಲ್ಲೂ ಸಹ ಟೀವಿಗಳನ್ನು ಇಡುವ ಆರು ದೊಡ್ಡ ಪೆಟ್ಟಿಗೆಗಳು ಸಿಕ್ಕವು. ಒಂದು ಪೆಟ್ಟಿಗೆಯಲ್ಲಿ ಸುಮಾರು ಒಂದೂವರೆ ಟನ್ನಿನಷ್ಟು ಅಂಚೆಯಲ್ಲಿ ಹಾಕುವ ಹಾಗೆ ನಾಲ್ಕು ಫೋಲ್ಡ್ ಮಡಿಸಿದ ಕಂತೆ ಕಂತೆ ಬಿಳಿ ಪೇಪರುಗಳು ಸಿಕ್ಕಿವು. ಹಾಳೆಯ ಒಂದೇ ಮಗ್ಗುಲಲ್ಲಿ ಸ್ಪಷ್ಟವಾಗಿ ಮೂರಿಂಚು ಮಾರ್ಜಿನ್ನು ಬಿಟ್ಟು ಪುಟಕ್ಕೆ ಹನ್ನೆರಡೇಸಾಲು ಬರೆದ ಅಕ್ಷರಗಳು... ಇವು ತನ್ನ ಜೀವನದ ಅಸ್ವೀಕೃತ ಸಾಹಿತ್ಯ ಎಂದು ಸಾಹಿತಿ ತಿಳಿಸಿದರು. ಮತ್ತೊಂದು ಪೆಟ್ಟಿಗೆಯಲ್ಲಿ ಸುಮಾರು ಮುಕ್ಕಾಲು ಟನ್ನಿನಷ್ಟು ಸಾಹಿತಿ ವಿಳಾಸವಿರುವ ಅಂಚೆ ಚೀಟಿಗೆ ಗುದ್ದಿಸಿಕೊಂಡ ಕವರುಗಳು ಸಿಕ್ಕವು. ಅವು ಅಸ್ವೀಕೃತ ಲೇಖನಗಳು ಹಿಂದೆ ಬಂದ ಕವರುಗಳೆಂದು ಸಾಹಿತಿ ಸಮಜಾಯಿಷಿ. ಮತ್ತೊಂದು ಪೆಟ್ಟಿಗೆಯಲ್ಲಿ ಪಾಯಿಂಟ್ ಸಿಕ್ಸ್ ಟನ್ನಿನಷ್ಟು ಅರೆಬರೆ ಬರೆದ ಕಾಗದಗಳು ಸಿಕ್ಕವು. ಇವು ಸಾಹಿತಿಯ ಮುಂದಿನ ಮೇರು ಕೃತಿಗೆ ತಯಾರಿ ಎಂದು ವಿವರ ನೀಡಿದ್ದಾರೆ.

ಮುಂದಿನ ಪೆಟ್ಟಿಗೆಯಲ್ಲಿ ಕಾಲು ಟನ್ನಿನಷ್ಟು ಕಂಪ್ಯೂಟರ್ ಹಾಳೆಗಳೂ ಮತ್ತು ಬಿಳಿ ಹಾಳೆಗಳೂ ಸಿಕ್ಕಿವೆ. ಇದು ನಮ್ಮ ಸ್ವಂತ ಗಳಿಕೆ, ತಮ್ಮ ಸಂಬಳದಿಂದ ಕೊಂಡದ್ದು ತಮ್ಮ ಸಾಹಿತ್ಯ ಸೇವೆಗೆ ಎಂದು ಸಾಹಿತಿಗಳು ಸಮಜಾಯಿಷಿ ನೀಡಿದರೆ ಅವರ ಧರ್ಮಪತ್ನಿ ಹೆಂಡತಿ ಮಕ್ಕಳ ಹೊಟ್ಟೆಮೇಲೆ ಹೊಡೆದು ಈ ಪೇಪರು ತಂದಿರುವುದು ಎಂದಿದ್ದಾರೆ.

‘‘... ಆರನೇ ಪಟ್ಟಿಗೆಯಲ್ಲಿ ಸುಮಾರು ಐವತ್ತರಷ್ಟು ಮರದ ಸ್ಕ್ಯಾಪ್ ಹಾರಗಳು ಸಿಕ್ಕಿವೆ. ಅದು ಗಂಧದ ಹಾರ ತಮಗೆ ತಮ್ಮ ಅಭಿಮಾನಿಗಳು ಹಾಕಿದ್ದು ಎಂದು ಸಾಹಿತಿಗಳು ಹೆಮ್ಮೆಯಿಂದ ಹೇಳಿಕೊಂಡರು. ಆದರೆ ಅದು ಒರಿಜಿನಲ್ ಗಂಧದ ಹಾರವಲ್ಲವೆಂದು ಮನದಟ್ಟು ಮಾಡಿದ್ದೇವೆ. ಐದನೇ ಪೆಟ್ಟಿಗೆಯಲ್ಲಿ ಎರಡೂವರೆ ಡಜನ್ನು ಥಾಂ ಥಾಂ ಬಣ್ಣದ ಶಾಲುಗಳು ಸಿಕ್ಕಿದ್ದು ಅದೂ ತಮಗೆ ಸಂದ ಸನ್ಮಾನದ ಭಾಗ ಎಂದು ಸಾಹಿತಿ ವಿವರಿಸಿದ್ದಾರೆ.

‘‘... ಸದರಿ ಸಾಹಿತಿ ಮೇಲೆ ಎಂತಹ ಕೇಸು ಬುಕ್ ಮಾಡುವುದು ಎಂದು ಒಂದು ವಾರ ತಲೆ ಕಿತ್ತುಕೊಂಡೆವು. ಅಪಾರವಾಗಿ ಸಾಹಿತ್ಯ ರಚಿಸಿ ಹಲವಾರು ಮರಗಳ ನಾಶಕ್ಕೆ ಕಾರಣವಾಗಿರುವುದರಿಂದ ಪರಿಸರ ಪಾಲನೆ ಕಾಯಿದೆ ಪ್ರಕಾರ ಹನ್ನೆರೆಡು ಕೇಸುಗಳೂ ಮತ್ತು ಅವರ ಏರಿಯಾದ ಅಂಚೆ ಪೇದೆಗೆ ಶಕ್ತಿಮೀರಿ ಹೊರೆ ಹೊರೆಸಿದ (ಇವರ ಅಸ್ವೀಕೃತ ಲೇಖನಗಳಿಂದ) ಆರು ಕೇಸುಗಳನ್ನೂ ಬುಕ್ ಮಾಡಬಹುದೆಂದು ಸರಕಾರಕ್ಕೆ ನಮ್ಮ ಸಲಹೆ ನೀಡಿದ್ದೇವೆ. ಉತ್ತರಕ್ಕಾಗಿ ನಿರೀಕ್ಷೆಯಲ್ಲಿದ್ದೇನೆ...’’

ಮಾತು ಮನೇ ಕೆಡಿಸ್ತು...

- ನಾರೂಶ್ರೀ ಸೂರಿ

ಇಪ್ಪತ್ತು ವರ್ಷದ ಕೆಳಗೆ ನನ್ನ ಚಿಕ್ಕಪ್ಪನ ಮಗ ಚಂದ್ರು ಅಮೆರಿಕಕ್ಕೆ ಹೋದನಲ್ಲ, ಅದು ಆವಾಗ ನಮ್ಮ family circles ನಲ್ಲಿ ಒಂದು ರೀತೀದು earth-shaking event ಅನ್ನೋ ಥರಾ ಆಗಿತ್ತು. ಅವನ ಫ್ಯಾಕ್ಟರೀನವರು ಅವನನ್ನ ಒಂದೂವರೆ ತಿಂಗಳು ಟ್ರೈನಿಂಗಿಗೆ ಅಂತ ನ್ಯೂಯಾರ್ಕಿಗೆ ಹತ್ರ ಇರೋ ರಾಚೆಸ್ಟರ್ ಅನ್ನೋ ಜಾಗಕ್ಕೆ ಕಳಿಸಿದ್ರು. ಹಾಗಾಗಿ ಅವನು ನೋಡಿದ್ದು ಏನಪ್ಪ ಅಂದ್ರೆ ಆ ರಾಚೆಸ್ಟರ್ ಮತ್ತೆ ಅದನ್ನ ಬಿಟ್ರೆ ಒಂದು ಭಾನುವಾರದ್ ದಿನ ನ್ಯೂಯಾರ್ಕ್ ಸುತ್ತ ಬಸ್‌ನಲ್ಲಿ ಟೂರು ಇರಬಹುದು, ಅಷ್ಟೆ. ಆದ್ರೆ ಅವನು ಊರಿಗೆ ವಾಪಸು ಬಂದಾಗ ಅದೇನು ರಾಜಮರ್ಯಾದೇ ಅಂತೀರ ಅವನಿಗೆ! ''ಲೋ, ಚಂದ್ರು, ಅಮೆರಿಕಾ ನೋಡೋದು ಅನ್ನೋದಂತೂ ನಮ್ಮಗಳ ಹಣೇನಲ್ಲಿ ಬರೆದಿಲ್ಲ, ಕಡೇ ಪಕ್ಷ ಅದು ಹೇಗಿರತ್ತೆ ಅನ್ನೋದನ್ನ ಕೇಳಾದ್ರೂ ಕೇಳೋಣ'' ಅಂತ ಅವನನ್ನ ಕಾಫೀ ತಿಂಡೀಗೆ, ಊಟಕ್ಕೆ ಅಂತ ಜನಗಳು ಕರೆದದ್ದೂ ಕರೆದಿದ್ದೇ, ಇವನು ಅಲ್ಲೆಲ್ಲಾ ಹೋಗಿ ಚೆನ್ನಾಗಿ ಗದಕಿಬಿಟ್ಟು ಇರೋದು, ಇಲ್ಲದಿರೋದು ಸೇರ್ಸಿ ಭೋಡು ಬಿಟ್ಟದ್ದು ಬಿಟ್ಟಿದ್ದೇ.

ಅದೇ ಈಗ? ಎರಡು ವಾರ ಆಗಿದೆ, ನಾನು ಅಮೆರಿಕಾದಿಂದ ವಾಪಸ್ ಬಂದು-ನಾಕು ತಿಂಗಳ ಕಾಲ ಅಮೆರಿಕಾದ ಉದ್ದಾ ಅಗಲಾನೆಲ್ಲಾ ಜಾಲಾಡಿಸಿದ್ದು ಹೊಸ ಹೊಸ ಥರದ್ ಸಮಾರು ಅನುಭವಗಳೇ ಆಗಿವೆ. ಅದನ್ನೆಲ್ಲ ಯಾರ ಮುಂದಾದ್ರೂ ಹೇಳಿಕೊಳ್ಳೋಣಾ ಅಂದ್ರೆ ಕೇಳೋನು ಇದ್ರೆ ತಾನೆ! ''ಏನೋ ಸೂರಿ, ಅಮೆರಿಕಕ್ಕೆ ಹೋಗಿ ಬಂದೆಯಂತೆ, ಏನೇನ್ ನೋಡಿಕೊಂಡು ಬಂದೆ, ಅಲ್ಲಿ?'' ಅನ್ನೋದು ಬೇಡ, ಕಡೇ ಪಕ್ಷ ''ಏನು ಸಮಾಚಾರ, ಮೂರು ನಾಕು ತಿಂಗಳು ಅಡ್ರೆಸ್ಸೇ ಇರಲಿಲ್ಲ?'' ಅಂತ ಕೇಳೋರು ಕೂಡಾ ಇಲ್ಲವಲ್ಲ! ಹಾಗೇ ಅಂತ ಹೇಳಿ ''ಇಲ್ಲಿ ಕೇಳಿ, ನಾನು ಅಮೆರಿಕಾದಲ್ಲಿದ್ದಾಗ ಒಂದು ಸಲ ಏನಾಯ್ತೂ ಅಂತೀರಾ,...'' ಅಂತಾ ನಾನೇ ಮೇಲೆ ಬಿದ್ದುಕೊಂಡು ಹೋಗೋದಕ್ಕೂ ಆಗೊಲ್ಲ. ಛೆ, ಎಂಥಾದ್ದು ಇದು?...

''ರೀ, ಒಳ್ಳೇ ಮೊಗ್ಗಿನ ಜಡೆ ಹಾಕಬಹುದೂ ಹಾಗೆ ಬೆಳೆದು ಬಿಟ್ಟಿದೆ ನಿಮ್ಮ ಕೂದಲು, ಇವತ್ತಾದ್ರೂ ಹೋಗಬಾರದೆ, ಕಟ್ಟಿಂಗಿಗೆ?''

- ಅಂತ ನಮ್ಮೋಳು ತಾಕೀತು ಮಾಡಿದಾಗಲೇ ನನಗೆ ಎಚ್ಚರ ಆಗಿದ್ದು... ಆವಾಗಲೇನೇ I saw the light ಅಂತ ಆಗಿದ್ದೂನೂ.

ಛೆ, ಇದ್ಯಾಕೆ ಮುಂಚೇನೆ ಹೊಳೀಲಿಲ್ಲ, ನನ್ನ ತಲೇಗೆ! ನಮ್ಮ ಗೋವಿಂದೂನೂ ಅಷ್ಟೆ, ಅವನ ಕಸುಬಿನವರು ಬಹಳ ಜನದ ಹಾಗೇನೇ- ಕುರ್ಚೀ ಮೇಲೆ ಕೂಡಿಸಿ ಆ ಬೆಡ್‌ಷೀಟನ್ನ ಹೊದಿಸಿದ್ದು ಅಂತ ಆದ ಮೇಲೆ ಅದರ ಕೈ ಮುಂದೆ ಓಡಬೇಕೂ ಅಂತ ಅಂದ್ರೆ, ಮಾತು ಇರಲೇಬೇಕು. ಒಂದೋ, ಅವನು ಏನಾದ್ರೂ ಹೇಳತೀರಬೇಕು, ಇಲ್ಲಾ, ಕಟಿಂಗಿಗೆ ಅಂತ ಕೂತೋರಾದ್ರೂ ಹೇಳತಾ ಇರಬೇಕು. ಆದ್ರೆ ಯಾರೂ ಮಾತಾಡ್ತಾ ಇರಲಿಲ್ಲ ಅಂದ್ರೆ ಮಾತ್ರ ಕೆಲಸ ಮುಂದಕ್ಕೇ ಹೋಗುತ್ತಿರಲಿಲ್ಲ... ಒಂದು ರೀತೀಲಿ ಅದು voice activated ಅಂತ ಹೇಳಬಹುದು.

ಅಂಥಾ ಒಳ್ಳೇ pair of willing ears ಇರೋದನ್ನ ಮರೆತು ಸುಮ್ಮನೆ ನನ್ನ ಕಥೇನ ಕೇಳೋರು ಯಾರೂ ಇಲ್ಲ ಅಂತ ಒದ್ದಾಡ್ತಾ ಇದ್ದೀನಲ್ಲ ನನ್ನ ಬುದ್ಧೀಗಿಷ್ಟು ಅಂದುಕೊಂಡು ಜೇಬಲ್ಲಿ ಕಾಸು ಇಟ್ಕೊಂಡು ಕಟಿಂಗಿಗೆ ಹೊರಟೆ.

ಬಂದೋನು ನನ್ನನ್ನ ಕೂಡಿಸಿ ಬಟ್ಟೆ ಹೊದಿಸಿದವನೇ ಶುರು ಮಾಡಿಕೊಂಡ ಗೋವಿಂದು-

''ಏನು ಸಾರ್, ತುಂಬಾ ದಿನ ಆದಮೇಲೆ ಬರ್ತಾ ಇದ್ದೀರಿ? ಕಟ್ಟಿಂಗಿಗೆ ಬೇರೆ ಕಡೆ ಏನಾದ್ರೂ ಹೋಗ್ತಾ ಇದ್ರಾ?...''

''ಇಲ್ಲಾ, ಗೋವಿಂದೂ, ಊರಲ್ಲಿರಲಿಲ್ಲ ಅಷ್ಟೆ... ಅಮೆರಿಕಾಕ್ಕೆ ಹೋಗಿದ್ದೆ... ನಾಕು ತಿಂಗಳು.''

''ಪರವಾಗಿಲ್ವೆ! ನಾಕು ತಿಂಗಳು ಅಂದ್ರೆ ಚೆನ್ನಾಗೇ ಆಗಿರಬೇಕೂ ಅಂತೀನಿ ಖರ್ಚು...''

''ಅಂಥಾದ್ದೇನೂ ಹೆಚ್ಚು ಖರ್ಚು ಅನ್ನೋದು ಆಗಲಿಲ್ಲ. ಏರೋಪ್ಲೇನ್ ಟಿಕೆಟ್ಟು ಮತ್ತೆ ಸಣ್ಣಾ ಪುಟ್ಟ ಖರ್ಚಿಗೇ ಅಂತ ಇಲ್ಲಿಂದ ಮಾಡಿಸ್ಕೊಂಡು ಹೋಗಿದ್ದ ಒಂದಿಷ್ಟು ಡಾಲರುಗಳನ್ನ ಬಿಟ್ರೆ ಮಿಕ್ಕಿದ್ದು ನಮ್ಮ ಮಗನೇ ನೋಡಿಕೊಂಡ, ಖರ್ಚನ್ನೆಲ್ಲ. ಎಲ್ಲದ್ದಕ್ಕೂ ನಂದೇ ದುಡ್ಡೂ ಅಂತ ಆಗಿದ್ದಿದ್ರೆ, ತುಂಬಾನೇ ಆಗಿರೋದು... ಒಂದು ಡಾಲರ್‌ಗೆ ನಲವತ್ತೆರಡೂ ಅಂದ್ರೆ, ನೀವೇ ಲೆಕ್ಕಾ ಹಾಕಿಕೊಳ್ಳಿ.''

Captive audience ಅಂತ ಒಬ್ಬ ಸಿಕ್ಕಿದ್ದಾನೆ ಅನ್ನೋವಾಗ ನಾವು ಬಿಡತೇನೆಯೇ? ಏನೇನು ಹೇಳಬೇಕೂ ಅಂತ ಮನಸ್ನಲ್ಲಿ ಇತ್ತೋ ಎಲ್ಲಾನೂ ಅವನಿಗೆ ಕೊರೆದೆ.

'ಸಾರ್, ನೀವು ಹೇಳೋದು ನೋಡಿದ್ರೆ ಅದು ಒಳ್ಳೇ ಸ್ವರ್ಗದ ಥರಾ ಇರಬೇಕೂ ಅಂತೀನಿ ಅಮರಿಕಾದಲ್ಲಿ... ನಮ್ಮ ದೇಶಾನೂ ಇದೆ ನೋಡಿ... ಈ politicians

ಗಳು ಇರೋ ತನಕಾ ಇಲ್ಲಿ ಏನು improvement ಊ ಆಗೊಲ್ಲ... ಬರಕೊಡತೀನಿ, ಬೇಕಾದ್ರೆ''

''ಆ ರಾಜಕಾರಣೀಗಳಿಗೆ ಗೋಲೀ ಹೊಡೀರಿ. ಮೂರುಹೊತ್ತೂ ಅವರನ್ನ ಬೈತಾ ಇರೋದನ್ನ ಬಿಟ್ಟು ನಾವುಗಳು ಒಬ್ಬೊಬ್ಬ ಮನುಷ್ಯಾನೂ ನಮ್ಮ ಕೈನಲ್ಲಿ ಏನಾಗತ್ತೋ ಅಂಥಾದ್ರಲ್ಲಾದ್ರೂ ಅಮೆರಿಕಾದವ್ರನ್ನ ಅನುಸರಿಸಿದ್ರೆ ಬೇಕಾದಷ್ಟು ಮಾಡಬಹುದು.''

''ಉದಾಹರಣೆಗೆ?...''

''ಬೀದೀನಲ್ಲಿ ಎಲ್ಲಂದ್ರಲ್ಲಿ ಹೇಸಿಗೇ ಮಾಡೋದು, ನಮ್ಮ ಮನೇ ಕಸಾನ ತಗೊಂಡು ಹೋಗಿ ಎದುರು ಮನೇ ಮುಂದೆ ಬಿಸಾಕೋದು, ಅಂಥಾವನ್ನೆಲ್ಲಾ ಕೊಂಚ ಕಡಿಮೆ ಮಾಡೊದೂ ಅನ್ನೋದರಿಂದ ಹಿಡಕೊಂಡು ನಮ್ಮ ನಮ್ಮ ಕೈಲಾದ ರೀತಿನಲಿ ಒಬ್ಬೊಬ್ಬನೂ ಅಲ್ಲೀಯವರನ್ನ ಅನುರಿಸಬಹುದಲ್ಲ ಮೊದಲು...''

''ಅದೂ ವಾಸ್ತವಾನೇ ಅನ್ನಿ... ಅಂದ ಹಾಗೆ, ಅಲ್ಲಿದ್ದಷ್ಟು ದಿನಾನೂ ನೀವು ಕಟಿಂಗ್ ಮಾಡಿಸಿಕೊಳ್ಳಲಿಲ್ಲ ಅನ್ನಿಸತ್ತೆ, ನಿಮ್ಮ ತಲೇನ ನೋಡಿದ್ರೆ.''

''ಉಂಟೇ ಗೋವಿಂದೂ? ಮೂರು ಸಲ ಹೋಗಿದ್ದೆ... ಚೆನ್ನಾಗೇ ಬೋಳಿಸ್ಕೊಂಡೆ... ಹಜಾಮತ್ತೂ ಮಗನ ಹತ್ರ ಇಸಕೋ ಬಾರದೂ ಅಲ್ವೆ? ಹಾಗಾಗಿ ಒಂದೊಂದು ಸಲಾನೂ ಕಟಿಂಗಿಗೆ ಹದಿನಾಲ್ಕು ಡಾಲರ್ರು, ಟಿಪ್ಸ್‌ಗೆ ಒಂದು ಡಾಲರ್ರು ಅಂತ ನಾನು ಇಲ್ಲಿಂದ ತೊಗೊಂಡು ಹೋಗಿದ್ನಲ್ಲ, ಅದನ್ನೇ ಕೊಡತಿದ್ದೆ''

''ಟಿಪ್ಸ್‌ಗೇ ಅಂತ ಇಲ್ಲಿಂದ ನಲವತ್ತೆರಡು ಕೊಟ್ಟು ತಗೊಂಡು ಹೋದ ಡಾಲರ್ ಕೊಟ್ಟಿರೀ ಅಂದಮೇಲೆ... ಅದು ಯಾರೋ ಹುಡುಗೀನೇ ಇರಬೇಕೂ ಅಂತೀನಿ... ಒಳ್ಳೆ ಟೈಟ್ ಡ್ರಸ್ಸು ಹಾಕ್ಕೊಂಡು?...''

''ಒಂದು ಕಾಲದಲ್ಲಿ ಅವರುಗಳು ಹುಡುಗಿಯರಾಗಿದ್ರೂ ಅನ್ನೋದು ನಿಜ... ಟೈಟ್ ಡ್ರಸ್ಸೂ ಅನ್ನೋದೂ ನಿಜಾನೆ... ಇಪ್ಪತ್ತು ವರ್ಷದ ಹುಡುಗೀ ಆಗಿದ್ದಾಗ ಹೊಲಿಸಿದ ಡ್ರೆಸ್ಸನ್ನ ಅರುವತ್ತು ವರ್ಷ ನಡೀತಿರೋ ಕಾಲದಲ್ಲೂ ಹಾಕ್ಕೋತೀನಿ ಅಂದ್ರೆ, ಅದು ಇನ್ನು ಹೇಗೆ ತಾನೆ ಇರುತ್ತೆ?... ಅದು ಹಾಗಲ್ಲ. ಹೆಂಗಸಾಗಲೀ ಗಂಡಸಾಗಲೀ ಯಾರೇ ಕಟಿಂಗ್ ಮಾಡಲಿ ಸರಿ, ಅವರಿಗೆ ಅಲ್ಲಿ ಒಂದು ಡಾಲರ್ರನ್ನ ಕೊಡಲೇಬೇಕು, ಟಿಪ್ಸ್ ಅಂತ. ಹುಡುಗೀ ಕಟಿಂಗ್ ಮಾಡಿದ್ರೆ ಕೊಡತೀನಿ, ನೋಡೋಕ್ ಲಕ್ಷಣವಾಗಿದ್ರೆ ಕೊಡತೀನಿ ಅನ್ನೋಲ್ಲ ಅಲ್ಲೆಲ್ಲಾ''

ಅಂತೂ ನಮ್ಮೋರೂ ತಮ್ಮೋರು ಅನ್ನೋವರು ನನಗೆ ಮಾಡದೇ ಇದ್ದದ್ದನ್ನ ಈ ಗೋವಿಂದು ಮಾಡತಾ ಇದ್ದಾನೆ ಈಗ ಅಂದುಕೊಂಡು ಅಮೇರಿಕಾ ವಿಷಯ,

ಮತ್ತೆ ನಾವು ಅಲ್ಲೀಯವರನ್ನ ಎಲ್ಲೆಲ್ಲಿ ಅನುಕರಿಸಿದ್ರೆ ಒಳ್ಳೇದು ಅನ್ನೋದ್ರ ಬಗ್ಗೆ ಏನೇನು ಹೇಳಬೇಕೂ ಅಂತ ಮನಸ್ನಲ್ಲಿ ಇತ್ತೋ ಅವನ್ನೆಲ್ಲ ಕಟಿಂಗ್ ಮುಗಿಯೋ ತನಕಾ ಒದರಿದ್ದಾಯಿತು. ಹಾಗಾಗಿ ಎಲ್ಲಾ ಮುಗಿಯೋ ಹೊತ್ತಿಗೆ ನನ್ನ ತಲೆ ಒಂದೇ ಅಲ್ಲ, ಮನಸ್ಸು ಕೂಡಾ ಹಗುರ ಆದ ಹಾಗಾಗಿ ಒಂದು ಥರಾ ಹಾಯಂತ ಇತ್ತು.

''ಕಟಿಂಗು ತುಂಬಾ ಚೆನ್ನಾಗಿ ಬಂದಿದೇ ಗೋವಿಂದೂ'' ಅಂತ ಹೇಳಿ ಅವನಿಗೆ ಕಾಸು ಕೊಟ್ಟು ಆಚೆಗೆ ಬರಬೇಕೂ ಅನ್ನೋವಾಗ...

''ಏನು ಇಷ್ಟೇ ಕೊಟ್ಟಿದ್ದೀರೀ ಸಾರ್?'' - ಅಂತ ಕೇಳಿದ ಗೋವಿಂದು.

''ನಿಮ್ಮ ರೇಟು ಹದಿನೈದಲ್ವೇ, ಅದನ್ನೇ ಕೊಟ್ಟಿದ್ದೀನಲ್ಲ?''

''ಅದು ಸರಿಯಾಗೇ ಇದೆ... ಆದ್ರೆ tips ಊ?''

''ಒಳ್ಳೇ ತಮಾಷೇನೇ... ಕಾಲದಿಂದ್ಲೂ ನಾನು ಕಟಿಂಗಿಗೆ tips ಅಂತ ಕೊಡುತ್ತಿರಲಿಲ್ಲವಲ್ಲಾ''

''ಮತ್ತೆ ಅಮೆರಿಕಾದಲ್ಲಿ ಕೊಟ್ಟೇ ಅಂದ್ರಲ್ಲ? ಒಬ್ಬೊಬ್ಬ ವ್ಯಕ್ತೀನೂ ಅಮೇರಿಕಾದವ್ರನ್ನ ಅನುಸರಿಸಬೇಕೂ ಎಲ್ಲೆಲ್ಲಿ ಸಾಧ್ಯಾನೋ ಅಲ್ಲಿ ಅಂತ ಈಗ ತಾನೇ ಹೇಳತಾ ಇದ್ರಿ? ಆ ಅನುಸರಿಸೋದನ್ನ ಇಲ್ಲಿಂದಾನೆ ಪ್ರಾರಂಭಾ ಮಾಡೋದ್ ತಾನೇ?''

ಹಾಳಾದವನೆ ಅಂತ ಒಂದು ರೂಪಾಯಿ ಕೊಟ್ಟೆ.

''ಊಹುಂ, ಸಾಲದು''

''ಅದರ ಮೇಲೆ ಇನ್ನೆಷ್ಟೂ ಅಂತ ಕೊಡತಾರೆ?''

''ಆ ಊರಲ್ಲಿ ಎಷ್ಟು ಕೊಟ್ರಿ... ಒಂದು ಡಾಲರ್ ತಾನೆ? ಅಂದ್ರೆ ರೂಪಾಯಿ ಲೆಕ್ಕದಲ್ಲಿ ಎಷ್ಟಾಯ್ತು? ನಲವತ್ತೆರಡು ಅಲ್ಲವೆ? ಯಾಕೆ ಕೊಟ್ರಿ? ಕಟಿಂಗ್ ಮಾಡಿದೋಳು ಹೆಂಗಸು... ಮುದುಕಿಯಾಗಿದ್ರೆ ಏನಂತೆ ಅಂತಾನಾ? ಊಹುಂ, ಅದೆಲ್ಲಾ ಆಗೊಲ್ಲ. ಅಲ್ಲಿ ಕೊಟ್ಟಷ್ಟು, ಒಂದು ಡಾಲರ್ ಅಂದ್ರೆ ನಲವತ್ತೆರಡು ಕೊಡಿ ಅಂತ ನಾನು ಕೇಳತಿಲ್ಲ. ಐದು ಕೊಡಿ ಸಾಕು, ಬಂದಾಗಲೆಲ್ಲ... ಊರಿಗೆಲ್ಲಾ ಉಪದೇಶ ಹೇಳೋರು ಅದನ್ನ ನೀವೇ ಪಾಲಿಸದೇ ಹೋದ್ರೆ ಹ್ಯಾಗೆ?''

ಇನ್ನು ಮೇಲಿಂದ ಬೇರೆ ಕಡೆ ಹೋಗೋದು ಒಳ್ಳೇದು, ಆದ್ರೆ ಅಲ್ಲೂ ಕೂಡಾ ಬಾಯಿಮುಚ್ಕೊಂಡು ಕೂತಿದ್ರೆ ಕ್ಷೇಮ ಅಂದುಕೊಂಡು ಅವನು ಕೇಳಿದ ಐದು ರೂಪಾಯನ್ನ ಕೊಟ್ಟು ಮನೆಗೆ ಹೊರಟೆ

★★★

ಮೊಪೆಡ್ ಕಳೆದಿದೆ!

– ಕುಮುದಾ ಪುರುಷೋತ್ತಮ್

ತಮ್ಮ ಮುಂದಿದ್ದ ಕೋಸಿನ ವಡೆಯನ್ನು ನೋಡಿ ಪ್ರೊಫೆಸರ್ ಸಾಹೇಬರು ಮುಖ ಸೊಟ್ಟ ಮಾಡಿದರು. ''ಮಾರ್ಕೆಟ್ಟಿನಲ್ಲಿ ಈಗೀಗ ಕೋಸುಗಡ್ಡೆ ವಿನಹ ಯಾವುದೇ ತರಕಾರಿ ಸಿಗುವುದೇ ಇಲ್ಲವೇನು?'' ಕಳೆದ ನಾಲ್ಕೈದು ದಿನಗಳಿಂದ ಕೋಸಿನ ಹುಳಿ, ಪಲ್ಯ, ಚಿತ್ರಾನ್ನ, ಕೂಟು, ಮಜ್ಜಿಗೆ ಹುಳಿ, ಕಡೆಗೆ ಕೋಸಿನ ಹಲ್ವ! ಒಟ್ಟಿನಲ್ಲಿ ಅದರಲ್ಲಿ ಮಾಡಬಹುದಾದ, ಮಾಡಲಾಗದ, ಮಾಡಲೇಬಾರದ ಸಕಲವನ್ನೂ ಅವರಾಕೆ ಚೂಡಾಮಣಿ ಮಾಡಿ ತಿನ್ನಿಸಿದ್ದಳು. ಅದರ ಫಲಿತಾಂಶ ಹಿಂದಿನ ರಾತ್ರಿ ಕಂಡ ಕನಸೂ ಅದರದ್ದೇ. ಒಂದು ವಿಸ್ತಾರವಾದ ಹೊಲ. ಅಲ್ಲಿ ಸಾಲು ಸಾಲಾಗಿ ಆಕಾಶದತ್ತ ಮುಖ ತೆರೆದುಕೊಂಡ ಕುಂಬಳಕಾಯಿ ಗಾತ್ರದ ಕೋಸು ಗಡ್ಡೆಗಳು, ಅದ್ಯಾವ ಸೀಮೆ ಗೊಬ್ಬರ ಹಾಕಿದ್ದರೋ ಆಪಾಟಿ ಬೆಳವಣಿಗೆ! ಅಲ್ಲಿ ಅಲೆದಾಡುತ್ತಿದ್ದ ದನ, ಎಮ್ಮೆ, ಆಡುಗಳೊಡನೆ ತಾವು ಪೈಪೋಟಿಯಿಂದ ಕಚಕಚನೆ ಹಸಿ ಗಡ್ಡೆಯನ್ನೆ ಮೇಯತೊಡಗಿದಾಗ ಗಾಬರಿಯಿಂದ ನಿದ್ದೆ ತಿಳಿದೆದ್ದಿದ್ದರು. ಮುಂಜಾವಿನ ನಾಷ್ಟಾವಿಗೆ ಮತ್ತದೇ ಕೋಸಿನ ವಡೆ. ಇದುವರೆವಿಗೂ ತಾನೇನು ತಿನ್ನುತ್ತಿರುವೆನೆಂಬ ಪರಿವೆಯೇ ಇಲ್ಲದೆ ತಾವೇ ನಿರ್ಮಿಸಿಕೊಂಡಿದ್ದ ಬೌದ್ಧಿಕ ಪ್ರಪಂಚದಲ್ಲಿ ವಿಹರಿಸುತ್ತಾ ಇದ್ದ ಮರೆಗುಳಿ ತತ್ವಶಾಸ್ತ್ರದ ಪ್ರೊಫೆಸರ್ ಇಂದು ಊಟ ತಿಂಡಿಯ ಬಗ್ಗೆ ಗಮನ ಹರಿಸಿದ್ದು ಕಂಡು ಪತ್ನಿಗೆ ವಿಸ್ಮಯವಾಯಿತು. ''ಎದುರು ಮನೆ ರಾಜಮ್ಮ ತಮ್ಮ ಪಾರ್ಮಿನಲ್ಲಿ ಬೆಳೆದಿದ್ದೆಂದು ಮೂರು ಕೋಸುಗಡ್ಡೆ ಕೊಟ್ಟಿದ್ದಳು. ಈ ದುಬಾರಿ ದಿನಗಳಲ್ಲಿ ತಿನ್ನಲು ಬೇಜಾರೆಂದು ಬಿಸಾಡಲಾದೀತೇ? ಅದು ಮುಗಿಯುವ ವರೆಗೆ ನಾ ಮಾಡುವುದು ಅದೊಂದನ್ನೇ'' ತಿಂದರೆ ತಿನ್ನಿ ಬಿಟ್ಟರೆ ಬಿಡಿ ಎನ್ನುವ ಧಾಟಿಯಲ್ಲಿ ಸಪ್ತಪದಿ ತುಳಿದ ಕೈಹಿಡಿದಾಕೆ ಹೇಳಿದಾಗ ಅದನ್ನ ತಿನ್ನದೇ ಅನ್ಯಥಾ ಮಾರ್ಗವಿರಲಿಲ್ಲ.

ಕಾಲೇಜಿಗೆ ವೇಳೆಯಾಯಿತೆಂದು ಧಾವಿಸಿ ಮೊಪೆಡ್‌ಗೆ ರುಟಾಡಿಸಿ ಒದೆಯಲಿದ್ದಾಗ ಚೂಡಾಮಣಿ ಹೊರಗೋಡಿ ಬಂದಳು. ''ಸಂಬಳದ ಚೆಕ್ಕು ಮುರಿಸಿ ತನ್ನೀಂತ ನಾಲ್ಕು ದಿನಗಳಿಂದ ಹೊಡ್ಕೋತಾ ಇದ್ರೂ, ದಿನಾ ಮರ್ತು ಬರ್ತೀರಿ. ಮನೆಬಾಡಿಗೆ, ಹಾಲು, ಪೇಪರು, ಕಸಮುಸುರೆಯವರಿಗೆ ಎಷ್ಟು ದಿನಾಂತ ಸಬೂಬು ಹೇಳುವುದು? ಇವತ್ತಾದ್ರೂ ಬ್ಯಾಂಕಿಗೆ ಹೋಗಿ ಹಣ ತಂದ್ಕೊಡಿ.'' ಚೆಕ್ಕನ್ನು ಮಡಿಸಿ ಶರ್ಟಿನ ಜೇಬಿಗೆ ತುರುಕಿದಳು ಅರ್ಧಾಂಗಿ. ಎದುರು ಫ್ಲಾಟಿನ ರಮಾ ಬೇನ್

ರೂಪದಲ್ಲಿ ಮತ್ತೊಂದು ವಿಘ್ನ ಪ್ರೊಫೆಸರರನ್ನು ಕಾಡಿತು. ''ಭಾಯಿ ಸಾಬ್, ನಮ್ಮ ಮುನ್ನಿಗೆ ಸ್ಕೂಲು ಬಸ್ಸು ಮಿಸ್ಸಾಗಿಬಿಡ್ತು. ಲೇಟಾಗಿ ಹೋದರೆ ಮಿಸ್ಸು ಬೈತಾರಂತೆ. ಅಳ್ತಾ ಇದ್ದಾಳೆ. ನೀವು ಹೋಗೋ ದಾರೀಲಿ ಅವ್ಳನ್ನು ಸ್ಕೂಲು ಬಳಿ ಡ್ರಾಪ್ ಮಾಡ್ಬಿಡಿ'' ಮುದ್ದು ಮುದ್ದಾಗಿ ಬೆಳೆದಿದ್ದ ಮುನ್ನಿಗಾಗಲೇ ಬೆನ್ನು ಗೂನಾಗಿ ಅದರ ಮೇಲೆ ಐದು ಕಿಲೋ ತೂಕದ ಸ್ಕೂಲ್ ಬ್ಯಾಗು ಏರಿ ಕೂತಿತ್ತು. ಒಂದು ಕೈನಲ್ಲಿ ಟಿಫನ್ ಕ್ಯಾರಿಯರ್, ಮತ್ತೊಂದರಲ್ಲಿ ವಾಟರ್ ಬಾಟಲ್ ಪಾಪ ಆಡಿಕೊಂಡಿರುವ ವಯಸ್ಸಿನಲ್ಲಿ ಎಷ್ಟೊಂದು ಭಾರ ಹೊರುತ್ತಿದೆ ಮಗು. ವಾಟರ್ ಬಾಟಲನ್ನು ಮೊಪೆಡ್‌ನ ಮುಂದಿನ ಕೊಕ್ಕೆಗೆ ಸಿಕ್ಕಿಸಿದರು. ಮುನ್ನಿ ಹೊತ್ತ ಮೊಪೆಡ್ ಮುಂದಕ್ಕೋಡಿತು. ಮುಂದೆ ನಡೆಯಲಿದ್ದ ರಾಮಾಯಣದಲ್ಲಿ ಆ ವಾಟರ್ ಬಾಟಲಿನದೇ ಮುಖ್ಯ ಕಥಾ ಪಾತ್ರವೆಂಬುದನ್ನು ಹುಲು ಮಾನವರಾದ ತತ್ವಶಾಸ್ತ್ರ ಪ್ರೊಫೆಸರರೇನು ಬಲ್ಲರು ಪಾಪ!

ಶಾಲೆಯ ಬಳಿ ನಿಲ್ಲುತ್ತಲೇ ಮುನ್ನಿ ಧುಮ್ಮಿಕ್ಕಿ ಹಿಂದೆ ನೋಡದೆ 'ಥ್ಯಾಂಕ್ಯೂ ಅಂಕಲ್' ಕೂಗುತ್ತಲೇ ಒಳಗೋಡಿದಳು. ವಾಟರ್ ಬಾಟಲ್ ಕೊಕ್ಕೆಯಿಂದ ಜೋಕಾಲೆಯಾಡುತ್ತಲೇ ಇತ್ತು! ಹೊರಟು ಬಿಡೋಣವೆಂದರೆ ಪಾಪ, ಮುನ್ನಿ. ಅವರಮ್ಮ ಕ್ಯಾರಿಯರ್‌ನಲ್ಲಿ ಸುಖಾರೋಟಿ, ಬಟಾಟ ಪಲ್ಯ ಕೊಟ್ಟಿರುತ್ತಾರೆ. ಎರಡೂ ಗಟ್ಟಿ ಆಹಾರ. ನುಂಗಲಾರದೆ ನೀರು ಬೇಕಾದರೆ? ನಲ್ಲಿಯ ಕಲುಷಿತ ನೀರು ಕುಡಿದು ಕಾಮಾಲೆ, ಕಾಲರಾ... ಇತ್ಯಾದಿ? ರಾಮಾ ರಾಮಾ... ಪಾಪ ಪ್ರಜ್ಞೆಕಾಡಿ ಬಾಟಲ್ ಹಿಡಿದು ಶಾಲೆ ಹೊಕ್ಕರು. ಪ್ರಾಂಗಣದಲ್ಲಿ ವಿದ್ಯಾರ್ಥಿಗಳೆಲ್ಲಾ ವರ್ಗಾನುಸಾರವರಸೆಯಿಂದ ನಿಂತು ಕಣ್ಮುಚ್ಚಿ ಪ್ರಾರ್ಥನೆ ನಡೆಸುತ್ತಿದ್ದರು. ಇವರೋ ಕೈಗಡಿಯಾರ ನೋಡಿಕೊಂಡು ಚಡಪಡಿಸಿದರು. ಮುಂದಿರುವ ಯಾರ ಕೈಗಾದರೂ ಕೊಟ್ಟು ಹೋಗಿ ಬಿಡೋಣವೆಂದು ಹೆಜ್ಜೆ ಮುಂದಿಟ್ಟರೆ ಡ್ರಿಲ್ ಮೇಡಂ ಮುನಿಯಮ್ಮ ಕರ್ಜನಿಯನ್ನು ಮೂಗಿನ ಮುಂದಿಟ್ಟು 'ಶ್' ಸಪ್ಪಳ ಹೊರಡಿಸಿ ಕೆಕ್ಕರಿಸಿ ನೋಡಿದರು. ಕಾಲೇಜಿನಲ್ಲಿ ಪ್ರೊಫೆಸರರಾದರು ಅದೇಕೋ ಇಂದಿಗೂ ಸ್ಕೂಲಿನ ಮೇಡಂಗಳನ್ನು ಕಂಡರೆ ಎಂತಹುದೋ ಭೀತಿ. ದೀರ್ಘ ಪ್ರಾರ್ಥನೆ ಮುಗಿದೊಡನೆ ಮುನ್ನಿ ಓಡೋಡುತ್ತಾ ಬಂದು ಬಾಟಲ್ ಕಸಿಯುತ್ತಾ 'ಸಾರಿ, ಅಂಕಲ್' ಕೂಗುತ್ತಾ ತರಗತಿಯೊಳಗೋಡಿದಳು.

ಲೇಟಾಗಿ ಹೋಗಿದೆ. ಇಂದು ಪ್ರಿನ್ಸಿಪಾಲರಿಂದ ಮಂಗಳಾರತಿ ಖಂಡಿತಾ ಎಂದುಕೊಳ್ಳುತ್ತಾ ವಾಹನ ನಿಲುಗಡೆಗೆ ಬಂದರೆ ಮೊಪೆಡ್‌ನ ಕೀಲಿ ತೆರೆಯಲು ರಾಂಗ್ ಮಾಡುತ್ತಿದೆ! ಒದ್ದು ಬಿಡುವಷ್ಟು ಕೋಪಬಂತು. ಇದ್ದ ಬಲವನ್ನೆಲ್ಲಾ ಪ್ರಯೋಗಿಸಿ ಅಂತೂ ಇಂತೂ ಕೀಲಿ ತಿರುಗಿಸಿದ್ದಾಯ್ತು. ಬ್ಯಾಂಕಿನ ಮುಂದೆ

ಹಾಯುತ್ತಿದ್ದಂತೆ ಜೇಬಿನಲ್ಲಿದ್ದ ಚೆಕ್ಕಿನ ಜ್ಞಾಪಕ ಬಂತು. ಹೇಗಿದ್ದರೂ ಲೇಟಾಗಿಯೇ ಇದೆ. ಮತ್ತೊಂದು ಹತ್ತು ನಿಮಿಷ. ಹಣ ಪಡೆದೇ ಹೋಗೋಣ ಎಂದುಕೊಳ್ಳುತ್ತಾ ಅಲ್ಲಿ ನಿಂತಿದ್ದ ಹತ್ತಾರು ದ್ವಿಚಕ್ರ ವಾಹನದೊಡನೆ ತಮ್ಮದೂ ನಿಲ್ಲಿಸಿ ಹೊಳ ಒಕ್ಕರು.

ಕಾಲೇಜಿಗೆ ಅವಸರದಿಂದ ಹೊರಟು ಕೇವಲ ಮುಕ್ಕಾಲು ಘಂಟೆಯ ಬಳಿಕ ಸುಟ್ಟ ಬದನೇಕಾಯಿಯಂತಹ ಮುಖ ಮಾಡಿಕೊಂಡು ಆಟೋದಲ್ಲಿ ಬಂದು ನಿಂತ ಪತಿಯನ್ನು ಕಂಡು ಚೂಡಾಮಣಿಗೆ ದಿಗಿಲಾಯಿತು. ''ಈಗ ಮೊಪೆಡ್‌ನಲ್ಲಿ ಹೋದವರು ಆಟೋದಲ್ಲಿ ಬಂದಿಳೀತಿದ್ದೀರ? ಏನಾದ್ರೂ ಅಪಘಾತ ಗಿಪಘಾತ...? ಸಧ್ಯ ಎಲ್ಲೂ ಏಟು ಬಿದ್ದಿಲ್ಲ ತಾನೇ? ದೇವರು ದೊಡ್ಡವನು.

''ಅಪಘಾತವಾಗೋಕ್ಕೆ ವಾಹನ ಅಂತ ಒಂದಿದ್ರೆ ತಾನೇ? ಎಲ್ಲಾ ನಿನ್ನಿಂದ ಆದದ್ದು. ಚೆಕ್ಕು ಮುರಿಸಿ ತನ್ನೀಂತ ಸುಮ್ನೆ ಶಂಖ ಊದಿದೆಯಲ್ಲಾ. ಕಿವಿಮೇಲೆ ಹಾಕಿಕೊಳ್ಳದೆ ನೆಟ್ಟಗೆ ಕಾಲೇಜಿಗೆ ಹೋಗಿದ್ದಿದ್ರೆ ಎಲ್ಲಾ ಸರಿಯಾಗಿರ್ತಿತ್ತು. ನಿನ್ನ ಮಾತು ಕೇಳಿ ಬ್ಯಾಂಕಿನೊಳಗೆ ಹೋದೆ. ಹಣ ಪರ್ಸಿನೊಳಗಿಟ್ಟು ಹೊರಬರುವಷ್ಟರಲ್ಲಿ ಮೊಪೆಡ್ ಕಾಣೆಯಗಿತ್ತು. ಎಲ್ಲಿ ಹುಡುಕಿದ್ರೂ ಸಿಗಲಿಲ್ಲ. ಎಲ್ಲ ನನ್ನ ಗ್ರಹಚಾರ.''

'ಗ್ರಹಚಾರ ಅಂತ ತಲೆಮೇಲೆ ಕೈಯ್ಯಿಟ್ಟುಕೊಂಡು ಕೂತ್ಬಿಟ್ರೆ ಗ್ರಹಗ್ಳು ನಿಶ್ಚಲವಾಗಿ ನಿಂತು ಬಿಡತ್ಯೇ? ನಮ್ಮ ಪ್ರಯತ್ನ ನಾವು ಮಾಡ್ಬೇಕು. ಹೋಗಿ ಪೋಲಿಸ್ ಬಳಿ ದೂರುಕೊಡಿ.''

''ಅದಕ್ಕೇಂತಾನೇ ಪೋಲಿಸ್ ಸ್ಟೇಷನ್ನಿಗೆ ಹೋದೆ. ಇನ್‌ಸ್ಪೆಕ್ಟ್ರು ಮೊಪೆಡ್‌ನ ರಿಜಿಸ್ಟ್ರೇಷನ್ ನಂಬರ್ ಕೇಳ್ದ. ನನಗೆಲ್ಲಿ ಅದೆಲ್ಲಾ ಜ್ಞಾಪಕವಿರುತ್ತೆ? ಆರ್.ಸಿ. ಬುಕ್ಕು ಮೊಪೆಡ್‌ನ ಸೈಡ್ ಬಾಕ್ಸಿನಲ್ಲಿಟ್ಟಿದ್ದೆ. ಅದೂ ನಾಪತ್ತೆ ಅಂದೆ. ಹಾಗಾದ್ರೆ ನಾವೇನು ಮಾಡೋ ಹಾಗಿಲ್ಲ. ಮುಂದೆ ಹೋಗಿ ಬನ್ನಿ ಅಂತ ಬಾಗಿಲು ತೋರಿಸ್ದ.'' ಪ್ರೊಫೆಸರರು ವಾಹನ ಕೊಂಡ ತರುಣದಲ್ಲಿ ಅವರ ಭಾವಮೈದ ಗುರುಮೂರ್ತಿ ಭಾವನನ್ನು ಸೀಟಿನ ಮೇಲೆ ಕುಳ್ಳಿರಿಸಿ, ಅಕ್ಕನನ್ನು ಪಕ್ಕ ನಿಲ್ಲಿಸಿ ತನ್ನ ಕ್ಯಾಮರಾವಿನಲ್ಲಿ ಸೆರೆಹಿಡಿದಿದ್ದ. ಅದೀಗ ನೆನಪಿಗೆ ಬಂದು ಓಬೀರಾಯನ ಕಾಲದಿಂದ ಶೇಖರಾವಾಗಿದ್ದ ಹಳೆಯ ಫೋಟೋಗಳ ರಾಶಿಯ ಮುಂದೆ ಇಬ್ಬರೂ ಕುಳಿತರು. ಒಂದೆರಡು ತಾಸಿನ ಬಳಿಕ ಅರ್ಧ ಆಗಲೆ ಮಸುಕಾಗುತ್ತಿದ್ದ ಭಾವಚಿತ್ರ ಪತ್ತೆ ಹಚ್ಚಿದ್ದಾಯಿತು. ಅದನ್ನೇ ತೆಗೆದುಕೊಂಡು ಹೊಗಿ ಪೋಲಿಸ್ ಬಳಿ ದೂರು ದಾಖಲಿಸಿದರು. ''ಇಲ್ನೋಡಿ ಮೇಸ್ಟ್ರೇ ದೂರು ದಾಖಲ್ ಮಾಡ್ಕೊಂಡಿದ್ದೇವೆ. ಸುಳಿವು ದೊರೆತರೆ ನಾವೇ ಸಂಪರ್ಕಿಸುತ್ತೇವೆ. ನೀವು ಪದೇ ಪದೇ ಬಂದು ತೊಂದರೆ ಕೊಡಬೇಡಿ.'' ಪೋಲಿಸಿ ಅಧಿಕಾರಿ ಅಧಿಕಾರ ವಾಣಿಯಲ್ಲಿ ಹೇಳಿ ಬೀಳ್ಕೊಟ್ಟ.

★ ★ ★

''ಯೂ ಆರ್ ಅಂಡರ್ ಅರೆಸ್ಟ್'' ಪೋಲಿಸ್ ಅಧಿಕಾರಿ ಪ್ರೊಫೆಸರತ್ತ ನೋಡುತ್ತಾ ಘರ್ಜಿಸಿದ ತೇಟ್ ಸಿನಿಮಾ ಮಾದರಿಯಲ್ಲಿ ಕೇವಲ ಎರಡೇ ನಿಮಿಷಕ್ಕೆ ಮುಂಚೆ ಅಧಿಕಾರಿ ಆಗಂತುಕರೊಬ್ಬರೊಡನೆ ಗೇಟ್ ತೆಗೆದು ಒಳಬಂದಾಗ ತಮ್ಮ ಮೊಪೆಡ್ ಸಿಕ್ಕ ಶುಭಸಮಾಚಾರ ಹೊತ್ತು ಬಂದಿದ್ದಾರೆ ಎಂದುಕೊಂಡು ಗಂಡ ಹೆಂಡತಿ ಇಬ್ಬರೂ ಧಾವಿಸಿ ಬಂದು ಸ್ವಾಗತ ನೀಡಿದ್ದರು. ಈಗ ನೋಡಿದರೆ ಆತ ಕೆಂಡ ಕಾರುತ್ತಿದ್ದಾರೆ! ಚೂಡಾಮಣಿಗಿನ್ನು ಸುಮ್ಮನಿರಲು ಸಾಧ್ಯವಿರಲಿಲ್ಲ. ಪತಿಯ ಪರ ವಕಾಲತ್ತು ಎತ್ತಿಕೊಂಡರು. ''ಸಾರ್, ನನ್ನ ಯಜಮಾನರು ಒಂದು ವಿಧವಾದ ವಿಲಕ್ಷಣ, ಮರೆಗುಳಿ ವ್ಯಕ್ತಿಯೇ ಹೊರ್ತು ಯಾರಿಗೂ ತೊಂದರೆ ಕೊಡೋದಾಗ್ಲಿ, ಅಪರಾಧಪ್ರವೃತ್ತಿಯವರಾಗ್ಲಿ ಅಲ್ಲ. ಪ್ರಾಮಾಣಿಕವಾಗಿ ಹುಡುಗ್ರಿಗೆ ಕಾಲೇಜಿನಲ್ಲೇ ಪಾಠ ಹೇಳಿ ಜೀವನ ಮಾಡ್ತಿರೋವ್ರು. ಕಾಸಿಗೆ ಕಾಸು ಸೇರಿಸಿ ಕೊಂಡ್ಕೊಂಡ ವಾಹನ ಕಳ್ಕೊಂಡು ದೂರು ಕೊಟ್ರೆ ಕೊಟ್ಟವರನ್ನೇ ಅಪರಾಧಿ ಸ್ಥಾನದಲ್ಲಿ ನಿಲ್ಲಿಸುವಂತೆ ಮಾತಾಡ್ತಿರಲ್ಲಾ ಇದು ನ್ಯಾಯವಾ?

''ಇಲ್ನೋಡಿ ಮೇಡಂ, ನಿಮ್ಮ ಯಜಮಾನ್ರು ಈಗ ನಂಜೊತೆ ಬಂದಿರೋ ಸದ್ಗೃಹಸ್ತರ ಮೊಪೆಡ್‌ನ ಕದ್ದೊಯ್ದಿದ್ದೂ ಅಲ್ಲದೆ ತಮ್ಮ ಮೊಪೆಡ್ ಕಳುವಾಯ್ತು ಅಂತ ಸುಳ್ಳು ದೂರನ್ನೂ ಕೊಟ್ಟಿದ್ದಾರೆ.''

ಪ್ರೊಫೆಸರಿಗೆ ಈ ಮಾತಿನ ತಲೆ ಬುಡ ಅರ್ಥವಾಗಲಿಲ್ಲ. ಯಾರೀ ಹೊಸ ವ್ಯಕ್ತಿ? ತಾವು ಅವರ ಮೊಪೆಡ್‌ನ ಏಕೆ ಅಪಹರಿಸಬೇಕು? ತಮ್ಮ ಬಳಿಯೇ ದಿವ್ಯವಾದ ವಾಹನವಿತ್ತಲ್ಲ. ಅಂದು ಬ್ಯಾಂಕಿನ ಬಳಿ ತಮ್ಮ ವಾಹನವನ್ನೆಷ್ಟು ಹುಡುಕಿದ್ದರು? ಸಾಕ್ಷಿಯಾಗಿ ಬ್ಯಾಂಕಿನ ವಾಚ್‌ಮನ್ ಕೂಡ ಸಂಗಡ ಹುಡುಕಿದ್ದನಲ್ಲ. ತಮ್ಮ ವಾಹನ ಕಳುವಾಗಲೇ ಇಲ್ಲವೇ? ತಮ್ಮ ಕಣ್ಣು ಅಥವಾ ಸ್ಮೃತಿಯೇ ಮೋಸ ಮಾಡುತ್ತಿಲ್ಲವಷ್ಟೆ. ಈಗ ನಡೆಯುತ್ತಿರುವುದೆಲ್ಲಾ ನಿಜವೋ ಅಥವಾ ಭ್ರಾಂತಿಯೋ? ಏನೂ ಮಾತನಾಡಲು ತೋಚದೆ ಪೆಚ್ಚಾಗಿ ಕುಳಿತು ಬಿಟ್ಟರು. ಪೋಲಿಸ್ ಅಧಿಕಾರಿ, ಜೊತೆಗಿದ್ದ ವ್ಯಕ್ತಿ ಪರಸ್ಪರ ಮುಗುಳ್ನಗೆ ವಿನಿಮಯ ಮಾಡಿಕೊಂಡು ಇಬ್ಬರನ್ನೂ ಗಲಿಬಿಲಿ ಗೊಳಿಸಿಬಿಟ್ಟರು.

''ಪ್ರೊಫೆಸರ್, ಮೊಪೆಡ್ ಕಳುವಾದ ದಿನ ಮನೆಬಿಟ್ಟ ವೇಳೆಯಿಂದ ಎಲ್ಲೆಲ್ಲಿ ಹೋಗಿದ್ದಿರಿ, ಏನೇನು ಮಾಡಿದಿರಿ ಎಲ್ಲಾ ವಿಷದವಾಗಿ ಹೇಳಿ.''

ಅಂದು ಮುಂಜಾನೆ ಕೋಸುಗಡ್ಡೆ ವಡೆಯನ್ನು ತಿನ್ನಲಾರದೆ ತಿಂದದ್ದು, ಪತ್ನಿ ಚೆಕ್ಕು ಕೈಗಿತ್ತು ಬೆದರಿಕೆಯೊಡ್ಡಿದ್ದು, ಮುನ್ನಿಯನ್ನು ಶಾಲೆಯಲ್ಲಿ ಬಿಟ್ಟದ್ದು, ವಾಟರ್ ಬಾಟಲ್ ಹಗರಣ ನಂತರದ ಮೊಪೆಡ್‌ನ ನಾಪತ್ತೆ ಎಲ್ಲವೂ ಸಾದ್ಯಂತವಾಗಿ ವಿವರಿಸಿದರು.

''ಪ್ರೊಫೆಸರ್ ಸಾಬ್ ಎಲ್ಲಾ ನಾನು ಊಹಿಸಿದಂತೆಯೇ ನಡೆದಿದೆ. ನೀವು ಸ್ಕೂಲಿನಿಂದ ಹೊರಟಾಗ ಇವರ ಮೊಪಡ್ ಕದ್ದು ಬ್ಯಾಂಕಿಗೆ ಒಯ್ದಿದ್ದೀರ.''

''ನನ್ನದೇ ವಾಹನವಿರುವಾಗ ಇವರದೇಕೆ ಕದ್ದೊಯ್ಯಲಿ? ನಾನಂತಹವನಲ್ಲ. ಇಷ್ಟಕ್ಕೂ ಇವರ್‍ಯಾರು?''

''ಶಾಲೆಯ ಅಧ್ಯಾಪಕರು ರೇಣುಕಾರಾಧ್ಯ. ಇವರ ಮೊಪಡ್ ಕೂಡ ನಿಮ್ಮಂತಹದ್ದೇ ಮಾಡಲ್, ಬಣ್ಣವೂ ಒಂದೇ ಆಗಿ ಕಾಲೇಜಿಗೆ ಹೋಗುವ ಅವಸರದಲ್ಲಿ ಇವರದನ್ನು ಬ್ಯಾಂಕಿಗೆ ಒಯ್ದಿರಿ ಅಲ್ವೇ?''

ಪ್ರೊಫೆಸರರ ಕಣ್ಣು ಮಿಂಚಿತು ಹೌದಲ್ಲ. ಅಂದು ಅದಕ್ಕೇ ಬೀಗದ ಕೈ ತೆರೆಯಲು ತಕರಾರು ಮಾಡಿದ್ದು. ತಾವು ಬಲಪ್ರಯೋಗಿಸಿ ತೆಗೆದಿದ್ದು ಎಲ್ಲ ನೆನಪಿಗೆ ಬಂತು. ಕೋಲೆ ಬಸವನಂತೆ ಮೌನವಾಗಿ ತಲೆದೂಗಿದರು.

''ಬ್ಯಾಂಕಿನಿಂದ ಹೊರಬಂದಾಗ ಅದು ಬೇರೆಯ ವಾಹನ ಎಂಬುದು ಗಮನಿಸಿದ್ದೀರಿ. ಅಲ್ಲಿಲ್ಲದ ನಿಮ್ಮ ವಾಹನಕ್ಕಾಗಿ ಹುಡುಕಾಡಿದ್ದೀರಿ. ನನ್ನ ಊಹೆ ಸರಿತಾನೇ?''

''ಹಾಗಾದ್ರೆ ನನ್ನ ವಾಹನ ಶಾಲೆಯಲ್ಲಿದೆಯೇ?''

''ಕರೆಕ್ಟ್, ಹಾಗೇ ಈ ಮೇಷ್ಟ್ರ ವಾಹನವೂ ಬ್ಯಾಂಕಿನ ಬಳಿ ಸುರಕ್ಷಿತವಾಗಿದೆ. ಒಂದು ವಾರದಿಂದ ಒಂದು ಮೊಪೆಡ್ ಅನಾಥವಾಗಿ ನಿಂತಿದೆ ಎಂಬ ಸುದ್ದಿ ಬ್ಯಾಂಕಿನಿಂದ ನಮಗೆ ಬಂದಿತ್ತು. ಅದೇ ರೀತಿ ವಾರಸುದಾರರಿಲ್ಲದಿರುವ ಮೊಪೆಡ್ ಒಂದು ಸ್ಕೂಲಿನ ಬಳಿ ಇದೆ ಎಂಬ ದೂರು ಪ್ರಿನ್ಸಿಪಾಲರಿಂದಲೂ ಬಂದಿತ್ತು. ಎರಡೂ ದೂರು ಮುಂದಿಟ್ಟುಕೊಂಡಾಗ ಪರಿಹಾರ ತನಗೆ ತಾನೇ ದೊರಕಿತು.''

''ಸಧ್ಯ ಜೀವ ಬಂತು ಸಾರ್. ನನ್ನನ್ನು ಕಳ್ಳ ಎಂದಾಗ ನನ್ನ ಜಂಘಾಬಲವೇ ಉಡುಗಿಹೋಯ್ತು. ಇಷ್ಟು ವರ್ಷ ಗೌರವದಿಂದ ಬಾಳಿ ಈಗ ಈ ಅಪವಾದ ಹೊತ್ತು ತಲೆ ಎತ್ತಿ ಹೇಗೆ ತಿರುಗೋದು ಅಂತ ಚಿಂತೆಯಾಗಿಬಿಡ್ತು. ನನ್ನ ಅಜಾಗರೂಕತೆಯಿಂದ ಪಾಪ ಆ ಮೇಷ್ಟ್ರಿಗೂ ವೃಥಾ ತೊಂದರೆಯಾಯ್ತು. ನನ್ನ ಮರೆವೆಯೇ ಎಲ್ಲಕ್ಕೂ ಕಾರಣ. ಇನ್ನೊಮ್ಮೆ ಹಾಗೆ ಮಾಡುವುದಿಲ್ಲ ಅಂತ ವಚನ ಕೊಡ್ಲಾರೆ. ಯಾತಕ್ಕಂದ್ರೆ ಅದು ನನ್ನ ಸ್ವಭಾವ. ಆದರೂ ಎಚ್ಚರಿಕೆಯಿಂದ ಇರುವ ಪ್ರಯತ್ನವನ್ನಂತೂ ಮಾಡ್ತೀನಿ''

''ಹಾಗೇ ಮಾಡಿ ಪ್ರೊಫೆಸರ್ ಸಾಹೇಬ್ರೇ. ಎಲ್ಲರೂ ತಮ್ಮ ತಮ್ಮ ಪದಾರ್ಥಗಳನ್ನ ಜೋಪಾನಾಗಿ ಇಟ್ಕೊಂಡ್ರೆ ನಮ್ಮ ಇಲಾಖೆಗೆ ಕೆಲಸ ಎಷ್ಟೋ ಕಮ್ಮಿಯಾದೀತು.''

ಮನೆಯೊಡತಿ ತಂದಿಟ್ಟ ಸ್ಟ್ರಾಂಗ್ ಕಾಫಿ ಗುಟುಕರಿಸಿ ಮೊಪೆಡನ್ನು ಹಿಂದಿರುಗಿಸಲು ಪ್ರೊಫೆಸರರನ್ನು ಸ್ಟೇಷನ್ನಿಗೆ ಇನ್ಸ್‌ಪೆಕ್ಟರು ಕರೆದೊಯ್ದರು.

ಬ್ರಹ್ಮಾಂಡ ಗುಡಾಣ ಕ್ರಿಕೆಟ್ ಪಂದ್ಯ

– ಬಿ.ಆರ್. ನಾಗೇಶ್

ನನಗೆ ಬಂದ ಹಾಗೆ ಇಡಿಯ ದೇಶಕ್ಕೆ ಬಂದಿರುವ ಸಂಕಷ್ಟದಿಂದ ಪಾರಾಗಲು ಒಂದು ಅದ್ಭುತ ಕಾರ್ಯಸೂಚಿಯನ್ನು ಸಿದ್ಧಪಡಿಸಿದವನು, ನನ್ನ ಭೌತಶಾಸ್ತ್ರ ನಿಪುಣ ಸ್ನೇಹಿತ ಸೂರ್ಯನಾರಾಯಣ.

ನನ್ನ ಸಂಕಷ್ಟ: ವಿಶ್ವ ಎಂದು ನಾವು ಬಳಸುವ ಶಬ್ದಕ್ಕೆ ಪೃಥ್ವಿ ಎಂದು ಅರ್ಥವೇ ಅಥವಾ ಬ್ರಹ್ಮಾಂಡ ಎಂಬ ಅರ್ಥವೇ - ಎಂಬುದು. (ಕಪ್ ಬಂದ ಮೇಲೆ ಈ ಎರಡು ಶಬ್ದಗಳ ನಡುವಿನ ಅರ್ಥ ವ್ಯತ್ಯಾಸ ಅಳಿಸಿ ಹೋಗಿದೆ ನಿಜ)

ದೇಶದ ಸಂಕಷ್ಟ: ಕಪ್ ಎಂಬ ಶಬ್ದ ಬಳಸಿದಾಗಲೆಲ್ಲಾ, ಭಾರತೀಯರಾದ ನಮಗೆ ಚಹಾದ ನೆನಪು ಬರುವುದೇ ಹೊರತಾಗಿ, ಆಟ ಆಡಿ ಅದನ್ನು ಗೆಲ್ಲಬೇಕೆಂಬ ಬೆವರು ಬಾರದೆ ಇರುವುದು.

ನನ್ನ ವಿಜ್ಞಾನಿ ಆಟಗಾರ ಸ್ನೇಹಿತನ ನಿವಾರಣೋಪಾಯ ಹೀಗಿದೆ: (1) ಇನ್ನು ಮುಂದೆ ಭಾರತ ಬ್ರಹ್ಮಾಂಡ ಗುಡಾಣ ಕ್ರಿಕೆಟ್ ಪಂದ್ಯಗಳಲ್ಲಿ ಮಾತ್ರ ಭಾಗವಹಿಸಬೇಕು. ಎಲ್ಲೆಲ್ಲಿ ಕಪ್ ಎಂಬ ಶಬ್ದವನ್ನು ಬಳಸುತ್ತಾರೋ, ಆ ಪಂದ್ಯಗಳಲ್ಲಿ ಭಾಗವಹಿಸಲೇ ಬಾರದು. ನಮ್ಮ ಸಂಸ್ಕೃತಿಯ ಪ್ರತೀಕವಾಗಿರುವ ಗುಡಾಣ ಎಂಬ ವಸ್ತು, ಕಪ್ ಎಂಬ ಕ್ಷುಲ್ಲಕ ವಸ್ತುವಿಗಿಂತ ಸಾವಿರಪಾಲು ಮೇಲು. (ಗುಡಾಣ ಹೊಟ್ಟೆ, ಗುಡಾಣ ದ್ರವ್ಯ ಸಂಪತ್ತು, ಗುಡಾಣ ಸ್ತ್ರೀ ಸೌಂದರ್ಯ, ಗುಡಾಣ ರಾಜಕಾರಣ, ಗುಡಾಣ ಲಂಚ - ಇವುಗಳೆಲ್ಲವೂ ನಮ್ಮ ಸಾಂಸ್ಕೃತಿಕ ಮೇಲ್ಮೆಯ ನಮೂನೆಗಳೆಂದು ಎಲ್ಲರಿಗೂ ಗೊತ್ತು ತಾನೇ?) ಹಾಗಾಗಿ ಗುಡಾಣ ಪಂದ್ಯ ಎಂಬುದೇ ಸೂಕ್ತ ಪ್ರಯೋಗವಾಗಿರುತ್ತದೆ.

ಲೋಕದಲ್ಲಿರುವ ಎಲ್ಲಾ ದೇಶಗಳ ಎಲ್ಲಾ ಟೀಮುಗಳಿಗೂ ನಮ್ಮೆದುರು ಆಡಲು ಒಂದು ಬಗೆಯ ನಾಚಿಕೆಯಾಗುತ್ತದೆ. - ಅಂಥ ಪ್ರಸಿದ್ಧ ಆಟಗಾರರು ನಮ್ಮಲ್ಲಿದ್ದಾರೆ. ಬ್ಯಾಟ್ ಹಿಡಿದು ವಿಕೆಟಿನ ಎದುರು ನಿಂತು, ಮೊದಲ ಚೆಂಡೆಸತದಲ್ಲಿ ಬೌಂಡರಿ ಬಾರಿಸಿ, ಎರಡನೆ ಚೆಂಡೆಸತದಲ್ಲಿ ಔಟಾಗುವ ಚಾಕಚಕ್ಯತೆ ತೋರುವ ವೀರರು, ಬುಸುಗುಟ್ಟುತ್ತಾ ಬಂದು ಒಂದು ಬೆವರಿನ ಆರು ಎಸೆತಗಳನ್ನು ವೈಡ್, ನೋಬಾಲ್ ಇತ್ಯಾದಿಗಳಿಂದ ಪುನೀತಗೊಳಿಸುವವರು, ಚೆಂಡಿನ ಹಿಂದೆ ಓಡಿ, ಬೌಂಡರಿ ರೇಖೆ ದಾಟಿದ ಬಳಿಕ ಅದನ್ನು ತಡೆ ಹಿಡಿಯಲು ಬಿದ್ದೇಳುವ ಕ್ಷೇತ್ರ ಪಾಲಕರು ಇತ್ಯಾದಿ. ಹಾಗಿರುವಾಗ ನಮ್ಮ ದೇಶದ ಉತ್ಸಾಹವನ್ನು, ಆಟದಲ್ಲಿರುವ ಪ್ರಭುತ್ವವನ್ನು

ಪ್ರಕಟಿಸಲು ಬ್ರಹ್ಮಾಂಡದ ಬೇರೆ ಬೇರೆ ಗ್ರಹಗಳಿಂದ ಬರುವ ಟೀಮುಗಳ ಎದುರು ಹೋರಾಡುವ ಅರ್ಹತೆಯನ್ನು ನಾವು ಪಡೆದಿದ್ದೇವೆ. ಇಂಥ ಒಂದು ಟೀಮಿಗೆ ಆಟಗಾರರನ್ನು ಆರಿಸುವ ಕ್ರಮವನ್ನು ಸೂರ್ಯನಾರಾಯಣ ಹೀಗೆ ವಿಭಾಗಿಸುತ್ತಾನೆ.

(1) ಉತ್ತಮ ಓಪನಿಂಗ್ ಬಾಟ್ಸ್‌ಮೆನ್‌ಗಳು ಇವರಿಗೆ ಇರಲೇಬೇಕಾದ ಮುಖ್ಯ ಅರ್ಹತೆ ಎಂದರೆ, ದೇಹದ ಎಲ್ಲಾ ಕಡೆಗಳಲ್ಲಿಯೂ ವಿವಿಧ ರೀತಿ ಪ್ಯಾಡ್ ಕಟ್ಟಿಕೊಳ್ಳಲು ಬೇಕಾದಷ್ಟು ಮಾಂಸಖಂಡಗಳು; ದೇಶೀಯ ಉತ್ಪನ್ನವಾದ ಉಪ್ಪಿನಕ್ಕಾಯಿ ಮಾರಾಟದ ಜಾಹಿರಾತಿನಲ್ಲಿ ಕಾಣಿಸಿಕೊಳ್ಳುವ ಜನಪ್ರಿಯತೆ; ಪಂದ್ಯದ ಮೊದಲ ಒಂದು ತಿಂಗಳು ಟರ್ಫ್‌ಮೇಲೆ ಹೊರಳಾಡುವ ಅಭ್ಯಾಸ, ಸಾಧ್ಯವಾದರೆ ''ದಾಂಡುವೀರ'', ''ಬೀಸುವೀರ'' ಮೊದಲಾದ ಪ್ರಶಸ್ತಿಗಳನ್ನು ಗಿಟ್ಟಿಸಿಕೊಳ್ಳಬೇಕೆಂಬ ಛಲ. ಇಂಥ ಆಟಗಾರರು ಮದುವೆಯಾಗದಿರುವುದು ಸೂಕ್ತ. ಇವರ ತಲೆಗೂಡಿಗೆ ಹೆಲ್ಮೆಟ್ ಆಕೃತಿಯೇ ಇರಬೇಕಾದದ್ದು ಮುಖ್ಯ ವಿಚಾರ.

(2) ಮಧ್ಯಮ ಮೆಟ್ಟಿಲ ಆಟಗಾರರು. ಭಾರತೀಯ ಮಧ್ಯಮ ವರ್ಗದ ಎಲ್ಲಾ ಲಕ್ಷಣಗಳು ಇವರಲ್ಲಿ ಇರಬೇಕು - ಮುಖ್ಯವಾಗಿ ಅನಿಶ್ಚಿತತೆ. ಚೆಂಡು, ಎಸೆತಗಾರನ ಕೈತಪ್ಪಿದೊಡನೆಯೆ, ಇವರಿಗೆ ತಮ್ಮ ಹೆಂಡತಿ ಮಕ್ಕಳ ನೆನಪಾಗಬೇಕು; ಮನೆಕಟ್ಟಲು ತೆಗೆದುಕೊಂಡಿರುವ ಸಾಲದಲ್ಲಿ ಇನ್ನೆಷ್ಟು ಬಾಕಿ ಇದೆ ಎಂದು ಲೆಕ್ಕಹಾಕುವಂತಿರಬೇಕು; ಯಾವುದಾದರೂ ಕಂಪೆನಿಯವರು ತಮ್ಮ ಜಾಹಿರಾತಿಗಾಗಿ ಕರೆಯುತ್ತಾರೆಯೆ ಎಂದು ಕಾದು ನೋಡುತ್ತಾ, ಹೊಸಬಗೆಯ ಪ್ಯಾಂಟ್ ಧರಿಸುತ್ತಾ, ತ್ರಿಲೋಕ ಸುಂದರಿಯೊಬ್ಬಳು ಪ್ಯಾಂಟಿನ ಕಿಸೆಯೊಳಗೆ ಕೈ ಹಾಕುವ ದೃಶ್ಯದಿಂದ ಮೈನವಿರೇಳುವ ಅನುಭವವನ್ನು ಊಹಿಸುತ್ತಾ ಇರುವ ಜನ. ಈ ಮಧ್ಯಮ ವರ್ಗದವರನ್ನು ನಂಬಿ ಎಷ್ಟೋ ಕಂಪೆನಿಗಳು ದಿವಾಳಿಯಾಗಿ ಹೋಗಿವೆ - ಎಷ್ಟೋ ಕಂಪೆನಿಗಳು ಅಂತರ್‌ರಾಷ್ಟ್ರೀಯ ಮಾರುಕಟ್ಟೆಗೆ ಹೊಕ್ಕಿವೆ. ಈ ಮಧ್ಯಮ ಮೆಟ್ಟಿಲ ಆಟಗಾರರು ಎಲ್ಲದರಲ್ಲೂ ಮಧ್ಯಮವೇ. ಮಧ್ಯಮನಾಗಿದ್ದವನ ನೆರಳಾಗಿರುವ ಯೋಗ್ಯತೆಯೂ ಇವರಿಗಿಲ್ಲ. ತಾವು ಯಾರಿಗಾಗಿ ಆಡುತ್ತೇವೆ - ದೇಶಕ್ಕಾಗಿಯೇ - ಅಥವಾ ತಮ್ಮ ಊರಿನ ಪಂಜುರ್ಲಿ ಭೂತಕ್ಕಾಗಿಯೇ? ಎಂದು ಸ್ಪಷ್ಟವಾಗಿ ತಿಳಿಯದ ಜನ. ಹೆಚ್ಚಾಗಿ ಹತ್ತು ರನ್ ಗಳಿಸುವುದರ ಒಳಗೆ, ಬ್ಯಾಟನ್ನು ನೆಲಕ್ಕೆ ಹೊಡೆಯುತ್ತಾ, ಶಿರೋ, ಭೂಷಣವನ್ನು ಜಾರಿಸುತ್ತಾ, ಪೆವಿಲಿಯನ್‌ಗೆ ಮರಳುವ ಇವರ ಗತ್ತುಗಾರಿಕೆ ಯಾವ ದೇಶಕ್ಕಾದರೂ ಹೆಮ್ಮೆಯ ನಟನೆಯೇ.

(3) ವಿಕೆಟ್‌ಕೀಪರ್. ಈತನ ಗಂಟಲು ಬಹಳ ದೊಡ್ಡದಾಗಿರಬೇಕು. ಪೆವಿಲಿಯನ್ ಗೋಡೆಗೂ ಅದು ಕೇಳಿಸುವಂತಿರಬೇಕು. ಒಂದು ರೀತಿಯ ಅರೆ ರಾಕ್ಷಸ ಜಾತಿಯವ. ಆಚೀಚೆ ನೋಡುವುದರ ಒಳಗಾಗಿ, ಬಾಲ್ ಕೈಯಲ್ಲಿ ಇದ್ದರೂ

ಇಲ್ಲದಿದ್ದರೂ, ಬೇಲ್ಸ್ ಹಾರಿಸುವ ಚಾಕಚಕ್ಯತೆ ಇವನಿಗಿರಬೇಕು. ಚೆಂಡು ಇವನ ಕೈತಪ್ಪಿ ಬೌಂಡರಿ ಲೈನಿನತ್ತ ಧಾವಿಸಿದರೂ, ಇವ ಬೇಲ್ಸ್ ಹಾರಿಸುವ ಧೈರ್ಯ ತೋರಿಸಬೇಕು. ಇವನಿಗೆ ನ್ಯಾಯ ಅನ್ಯಾಯಗಳ ಮಿತಿ ಇರಬಾರದು. ಬಹುಶಃ ನಮ್ಮ ದೇಶದ ಪಾರ್ಲಿಮೆಂಟಿನಲ್ಲಿ ವಿಕೆಟ್ ಕೀಪರ್ ಆಗುವ ಯೋಗ್ಯತೆಯುಳ್ಳ ಹತ್ತಾರು ಮಂದಿ ಕಾಣಿಸುವುದರಿಂದ, ಅವರಲ್ಲಿ ಒಬ್ಬನನ್ನು ಆರಿಸಿ, ಟೀಮಿಗೆ ಸೇರಿಸುವುದು ರಾಜಕೀಯವಾಗಿಯೂ ಅತಿಯೋಗ್ಯ ಹೆಜ್ಜೆಯಾದೀತು.

(4) ಬ್ರಹ್ಮಾಂಡ ಸ್ಪರ್ಧೆಗೆ ನಮ್ಮಲ್ಲಿಂದ ನಾಲ್ಕು ಬಗೆಯ ಬೌಲರ್‌ಗಳು ಬೇಕಾಗುತ್ತಾರೆ. ಮೊದಲನೆಯವ ವೇಗಿ. ಈತ ಬೌಂಡರಿ ಲೈನಿನಿಂದ ಓಡಿಬಂದು, ಕೊನೆಗೆ ನೋಬಾಲ್ ಕೊಡುವುದರಲ್ಲಿ ಪ್ರವೀಣನಾಗಿರಬೇಕು. ಎರಡನೆಯವ ವೇಗಿಯೇ ಆಗಿದ್ದರೂ, ಅವನ ಗುರಿ ವಿಕೆಟ್‌ಗಳಲ್ಲ - ಬದಲಾಗಿ ಆಟಗಾರನ ತಲೆ, ತೊಡೆ, ತೊಡೆಸಂದು ಇತ್ಯಾದಿ. ಇಂಥವ ಒಂದು ಓವರ್‌ನಲ್ಲಿ ಆರು ಬಾಲುಗಳನ್ನು ಮಾತ್ರ ಕೊಡುತ್ತಾನೆಂದು ನಿಯಮವಿಲ್ಲ. ಎದುರಾಳಿ ಆಟಗಾರನ ತಲೆಯೊಳಗಿನ ಮಿದುಳು, ಕರ್ತವ್ಯಶೂನ್ಯವಾಗುವಂತೆ ಮಾಡುವುದೇ ಇವನ ಉದ್ದೇಶವಾಗಿರುವುದರಿಂದ, ಈತ ಕೊಡುವ ವೈಡ್‌ಬಾಲ್‌ಗಳಿಗೆ ಲೆಕ್ಕವಿಲ್ಲ. ಮೂರನೆಯವ ಬುಗರಿ ಬಾಲ್‌ನವ - ಸ್ಪಿನ್ ಅರ್ಥದಲ್ಲಿ - ಆ ಜಾತಿಗೆ ಸೇರಿದವ. ತನ್ನ ದೇಹದಲ್ಲಿ ಉತ್ಪತ್ತಿಯಾಗುವ ಚೈತನ್ಯವನ್ನು ಅತಿ ನಿಪುಣತನದಿಂದ ಬಳಸಿಕೊಂಡು, ಚೆಂಡು ಎಸೆಯುವವ. ಇವನ ಓಟ ಹೆಚ್ಚೆಂದರೆ ಮೂರು ಹೆಜ್ಜೆ. ಬ್ಯಾಟ್ ಹಿಡಿದವನಿಗೆ, ಇವನ ಬಾಲ್ ಇಂಥ ಕಡೆಯೆ ಪಿಚ್ ಆಗುತ್ತದೆ ಎಂದು ತಿಳಿಯುವಂತಿಲ್ಲ. ಬಾಲ್ ಎಲ್ಲೆಲ್ಲೋ ಬಿದ್ದು, ಎಲ್ಲೆಲ್ಲೋ ತಿರುಗಿ ಆಟಗಾರನ ದೇಹದ ಯಾವ ಭಾಗಕ್ಕೆ ತಾಗಿದರೂ ''ಹೌಸ್ ಈಸ್ ದಟ್'' ಎಂದು ಬೊಬ್ಬೆ ಹೊಡೆಯುವವ. ಇವನು ಎಸೆದ ಚೆಂಡು ಇದೇ ಕೋನದಲ್ಲಿ ಬರಬಹುದು ಎಂದು ಊಹಿಸಲು ವಿಕೆಟ್ ಕೀಪರ್‌ಗೂ ಸಾಧ್ಯವಿಲ್ಲ. ಹಾಗಾಗಿ ಈತ ಒಂದು ಓವರ್‌ನಲ್ಲಿ ಒಂದು ಬೌಂಡರಿಯನ್ನಾದರೂ ಧರ್ಮಾರ್ಥ ಕೊಡುವಷ್ಟು ಕರ್ತವ್ಯಶೀಲ. ಇವನ ಮುಂಗೈ ಯಾವ ರೀತಿಯಾಗಿ ತಿರುಗುತ್ತದೆ, ಅದಕ್ಕೆ ಹುಟ್ಟುವಾಗಲೇ ಕೀಲು ಇದ್ದಿರಲಿಲ್ಲವೋ, ಅಥವಾ ಈತ ಚಿಕ್ಕವನಿರುವಾಗ ಇವನ ಗೆಳೆಯ ಇವನ ಅಂಗೈಯನ್ನು ತಿರುಚಿದರಿಂದ ಹೀಗಾದದ್ದೇ - ಎಂದು ಯಾರಿಗೂ ತಿಳಿಯಲು ಸಾಧ್ಯವಿಲ್ಲ. ನಾಲ್ಕನೆಯವ ಹಾರುತ್ತಾ ಹಾರುತ್ತಾ ಒಂದು ಚೆಂಡನ್ನು ಎಸೆಯುತ್ತಾನೆ - ಅದು ಬಳಿ ನಿಂತಿರುವ ಅಂಪಾಯರ್ ಮುಖಕ್ಕೆ ತಾಗಿದರೂ ತಾಗೀತು - ಅಥವಾ ಎದುರಾಳಿಯ ಕಾಲನ್ನು ತಾಗಿದರೂ ತಾಗೀತು. ಇವನು ಚೆಂಡು ಎಸೆಯುವ ವೇಳೆ, ಆಟಗಾರನ ಸಮೀಪ ಒಬ್ಬ ಕ್ಷೇತ್ರಪಾಲ ನಿಲ್ಲಬೇಕು - ಅವ ಶಿರಸ್ತ್ರಾಣ ಹಾಕಿಕೊಂಡಿರಬೇಕು.

ಕಾರಣ ಇವ ಎಸೆದ ಚೆಂಡು, ಬ್ಯಾಟಿಗೆ ತಾಗಲೂಬಹುದು, ಬಳಿ ನಿಂತಿರುವ ಕ್ಷೇತ್ರಪಾಲಕನಿಗೂ ಬಡಿಯಬಹುದು.

ಇಂಥಾ ಹನ್ನೊಂದು ಜನರಿಗೆ ತರಬೇತಿ ಮುಖ್ಯ. ಇದಕ್ಕಾಗಿ ಮಂಗಳ ಗ್ರಹದ ಕ್ರೀಡಾಪಟುಗಳು ಬೇಕಾಗಬಹುದು. ಇದು ಬ್ರಹ್ಮಾಂಡ ಗುಡಾಣ ಕ್ರಿಕೆಟ್ ಪಂದ್ಯ ಆಗಿರುವುದರಿಂದ, ಮಂಗಳ ಗ್ರಹದಿಂದ ಬಂದವ ನಮ್ಮಂತೆಯೇ ಇರಬೇಕೆಂದಿಲ್ಲ. ಆದರೂ ಆತನಿಂದ ತರಬೇತಿ ಅಗತ್ಯ. (ಪರದೇಶವೇ ನಮ್ಮನ್ನು ಉದ್ಧರಿಸಬೇಕು - ಅದೇ ರೀತಿ ಪರಗ್ರಹ ಕೂಡಾ). ಆಟಗಾರರಿಗಿಂತ ಹೆಚ್ಚಿನ ಮುತುವರ್ಜಿಯಲ್ಲಿ ಈತನನ್ನು ದೇಶ ಸಾಕಬೇಕು. ಐದು ನಕ್ಷತ್ರವೇ ಅವನ ವಾಸಸ್ಥಾನ ಆಗಬೇಕು.


ಇನ್ನು ಆಟಗಾರರಿಗೆ ಕೊಡುವ ತರಬೇತಿ: ಮೊದಲಾಗಿ ಇವರನ್ನು ಮಾಂಸಾಹಾರಿಗಳನ್ನಾಗಿ ಮಾಡಬೇಕು. ಇದಕ್ಕಾಗಿ ಕೆಲವು ಗುಪ್ತ ಸಲಹೆಗಳು. ಅವರಿಗೆ ಕೋಳಿ ಮೊಟ್ಟೆಯನ್ನು ಮಸಾಲೆದೋಸೆ ರೂಪದಲ್ಲಿ ಕೊಡಬೇಕು. ಮಾಂಸವನ್ನು ವೆಜಿಟೇಬಲ್ ಬಿರಿಯಾನಿಯಂತೆ ಬಡಿಸಬೇಕು. ಚಿಕನ್‌ಸೂಪನ್ನು ಕಾಫಿ, ಚಹಾದಂತೆ ರುಚಿಕರಿಸಿ ಕುಡಿಯಲು ಕೊಡಬೇಕು. ಇವರ ದೇಹ ದಾರ್ಢ್ಯತೆಗೆ ಕಡೆಗೆ ಹೆಚ್ಚಿನ ಗಮನ ಕೊಡಬೇಕು. ಇವರು ಬ್ರಹ್ಮಾಂಡ ಕ್ರಿಕೆಟ್ ಟೀಮಿಗೆ ಸೇರಿಯಾದೊಡನೆಯೆ ಬ್ರಹ್ಮಚರ್ಯ ಪಾಲಿಸಬೇಕು. ಇವರು ಚೆಂಡನ್ನು ಹಿಂಬಾಲಿಸಿ. ಓಡಬೇಕಾಗುವುದರಿಂದ, ಉತ್ತಮ ಓಟಗಾರರಾಗಿರಬೇಕು. ಬಿದ್ದೊಡನೆ ಹೇಗೆ ಉರುಳಬೇಕು ಎಂಬ ತಂತ್ರವನ್ನು ಕರಗತ ಮಾಡಿಕೊಂಡಿರಬೇಕು. ಚೆಂಡು ಇವರ ಕೈ ಸಿಗಲಿ, ಬಿಡಲಿ, ಬೀಳುವುದು ಮುಖ್ಯ. ಇನ್ನಿಂಗ್ಸ್‌ನ ಮುಖ್ಯ ಆಟಗಾರ ಯಾರು ಎಂದು ತೀರ್ಮಾನಿಸುವಲ್ಲಿ ಇಂಥಾ ಉರುಳುವಿಕೆ ಬೀಳುವಿಕೆಗಳಿಗೂ ಮಾರ್ಕ್ ಸಿಗಬೇಕು - ಹೆಚ್ಚು ಉರುಳು ಸೇವೆಗೆ ಹೆಚ್ಚು ಮಾರ್ಕು.

ಇವರೆಲ್ಲರೂ ಭಾರತದಲ್ಲಿ ಸಿದ್ಧವಾಗುವ ಬೇರೆ ಬೇರೆ ವಸ್ತುಗಳ ಮಾರಾಟದಲ್ಲಿ ನೆರವಾಗಬೇಕು - ಜಾಹಿರಾತುಗಳ ಮೂಲಕ ಹಪ್ಪಳ, ಸಂಡಿಗೆ, ಉಪ್ಪಿನಕ್ಕಾ, ಗಾಂಧಿ ಟೊಪ್ಪಿ, ಚಪ್ಪಲಿ, ಶರ್ಟು, ಗುಲಾಬಿ, ಸೆಂಟ್, ಪುಳಿಯೋಗರೆ, ಮೈಸೂರು ಪಾಕ್ - ಹೀಗೆ ಲಕ್ಷಾಂತರ ಭಾರತೀಯ ವಸ್ತುಗಳ ಮಾರಾಟ ಇವರ ಮೂಲಕ ಆಗಬೇಕು. ಇವರು ಜಾಹಿರಾತಿನಲ್ಲಿ ತಿನ್ನುವ ಹಪ್ಪಳ ಬೇರೆ ಗ್ರಹ ಜೀವಿಗಳಿಗೆ ಯೋಗ್ಯವಾದದ್ದು. ಇವರು ತೋರಿಸುವ ಉಪ್ಪಿನಕ್ಕಾ ಮುದಿ ತಂದೆ ತಾಯಂದಿರಿಗೆ ವೈಕುಂಠ ರಸ್ತೆ ಆಗಬೇಕು. ಇವರು ತೋರಿದ ಮೈಸೂರು ಪಾಕ್ (ಎದುರಾಳಿಗಳು) ತಿಂದರೆ ಇವರಿಗೆ ವಿಜಯ ಖಂಡಿತ. ಗ್ರೌಂಡ್ ತುಂಬಾ ಸೆಗಣಿ ಸಾರಿಸಬೇಕಾದ ಶುಭಗಳಿಗೆ ಆಗಬಹುದು.

ಇನ್ನು ಇವರಿಗೆ ಸಿಗುವ ಆರ್ಥಿಕ ಲಾಭ: ಪ್ರತಿ ಪಂದ್ಯ ಆದೊಡನೆ ಒಂದು ಲಕ್ಷ ಗ್ಯಾರಂಟಿ - ಸೋತರೂ ಒಂದು ಲಕ್ಷ; ಗೆದ್ದರೂ ಒಂದು ಲಕ್ಷ. ಕೆಲವೊಮ್ಮೆ ಇವರಿಗೆ ಪುಕ್ಕಟೆ ಕಾರುಗಳು ಸಿಗುವುದೂ ಇದೆ. ಕೆಲವೊಮ್ಮೆ ಇವರು ಜೀವಮಾನ ಇಡಿ ಬಳಸಬಹುದಾದಷ್ಟು ಪೆಟ್ರೋಲ್ ಪುಕ್ಕಟೆಯಾಗಿ ಸಿಗಬಹುದು. ಇವರು ಹಲ್ಲು ಉಜ್ಜಬೇಕೆಂದಿಲ್ಲ - ಕಣ್ಣಿನಿಂದ ಕನ್ನಡಕ ತೆಗೆಯಬೇಕೆಂದಿಲ್ಲ - ಪ್ಯಾಂಟ್ ಶರ್ಟ್‌ಗಳಿಗೆ ಹಣ ವೆಚ್ಚ ಮಾಡಬೇಕೆಂದಿಲ್ಲ.

ಇಂಥ ಒಂದು ಟೀಮನ್ನು ಕಟ್ಟಿದರೆ, ನನ್ನ ಸ್ನೇಹಿತ ಸೂರ್ಯ ನಾರಾಯಣನ ಲೆಕ್ಕಚಾರದಂತೆ ನಾವು ಖಂಡಿತವಾಗಿಯೂ ಬ್ರಹ್ಮಾಂಡ ಗುಡಾಣ ಕ್ರಿಕೆಟ್ ಪಂದ್ಯದಲ್ಲಿ ಗೆಲ್ಲಬಹುದು. ಹೀಗೆ ಗೆದ್ದಾಗ, ಅಂಥಾ ಆಟಗಾರರು ಜಾಹಿರಾತುಗಳ ಮೂಲಕ ಪ್ರಿಸಿದ್ಧಿಸಿರುವ ತಿಂಡಿ ತೀರ್ಥಗಳನ್ನು ಉಪಯೋಗಿಸಬಹುದು. ಇಡಿಯ ದೇಶದ ಎಲ್ಲಾ ಶಾಲಾ ಕಾಲೇಜ್‌ಗಳಿಗೆ ಆಫೀಸುಗಳಿಗೆ, ಸರಕಾರಕ್ಕೆ ಕೂಡಾ ಒಂದು ವರ್ಷದ ರಜೆಯೂ ಸಿಗಬಹುದು.

★★★



"ನಿಮಗಿರೋದು ಎಲೆಕ್ಷನ್ ಫೀವರ್ ಅಷ್ಟೇ.
ಆರನೇ ತಾರೀಖಿನ ಹೊತ್ತಿಗೆ ಸರಿಹೋಗತ್ತೆ"

ಔಷಧಿ ಇಲ್ಲದೇ ನಿಮ್ಮ ಖಾಯಿಲೆ ಗುಣವಾಗಬೇಕೆ?

ಇಲ್ಲಿದೆ ನೋಡಿ, ಸುಲಭ, ಪರಿಣಾಮಕಾರಿ ಪರಿಹಾರ ಮಾರ್ಗ

– ವಿಜಯರಾಜ ಸುತಾ

ರೋಗದ ಚಿಹ್ನೆಗಳು	ಪರಿಹಾರ ಮಾರ್ಗ
1. ಬಿ.ಪಿ. ಜಾಸ್ತಿ ಆಗಿದೆಯೇ?	1. ನಿಮಗಾಗಿಯೇ ಮನೆಯಲ್ಲಿ ಉಪ್ಪಿಲ್ಲದ ಅಡಿಗೆ ತೆಗೆದಿಟ್ಟಿದ್ದರೆ, ಅದನ್ನು ಬಿಟ್ಟು ಉಳಿದವರಿಗಾಗಿ ರುಚಿರುಚಿ ಯಾಗಿ ಮಾಡಿರುವ ಪದಾರ್ಥ ಗಳನ್ನು ಗುಟ್ಟಾಗಿ ತಿಂದುಬಿಡಿ. ಒಂದು ದಿನ ತಿಂದರೆ ಏನೂ ಆಗುವುದಿಲ್ಲವೆಂಬ ಸಮಾಧಾನ ದಿಂದಿರಿ.
2. ಬಿ.ಪಿ. ಬಹಳ ಕಡಿಮೆಯಾಗಿ ಸುಸ್ತು ಹೆಚ್ಚಾಗುತ್ತಿದೆಯೇ?	2. ನಿಮ್ಮ Radio ದಲ್ಲಿ ರಾಜಕೀಯ ಧುರೀಣರ ಯಾವುದಾದರೂ ಒಂದು ಭಾಷಣ ಬರುತ್ತಿದ್ದರೆ ತಪ್ಪದೆ ಕೇಳಿ. ಭಾಷಣ ಕಾವೇರುತ್ತಿರು ವಂತೆ ನಿಮ್ಮ ರಕ್ತದ ಒತ್ತಡವೂ ಏರುತ್ತದೆ.
3. ತಲೆ ಸಿಡಿತವೇ?	3. ಹಿತವಾದ ಕರ್ನಾಟಕ ಸಂಗೀತದ ಒಂದು Casette ಹಾಕಿಕೊಂಡು ಕೇಳಿ.
4. ಮನಸ್ಸಿಗೆ ಬೇಸರವೇ? ಪಿರಿಪಿರಿಯೇ? ಡಿಪ್ರೆಷನ್ ಆಗಿದೆಯಾ?	4. ನಿಮ್ಮ ವಠಾರದ ಎದುರು ಮನೆಯವರು ಟಿ.ವಿ. ನೋಡಿಕೊಂಡು, ತಮ್ಮ ವೀಕ್ಷಿತ ವಿವರಣೆಯ ಮೂಲಕ ತಮ್ಮ ವಾಕ್ ವೈಖರಿಯ ಪ್ರದರ್ಶನವನ್ನು ತೋರುತ್ತಿರುವುದನ್ನು ನಿಗ ಇಟ್ಟುಕೇಳಿ.

5. ಹೊರಗಡೆ ವಾಹನಗಳ ಸದ್ದಿನಿಂದ ಟಿ.ವಿ. ನೋಡಲು ಸಾಧ್ಯವಾಗದೇ ರೇಗಾಡು-ವಂತಾಗುವುದೇ?

5. ವಾಹನದ ಗಲಾಟೆಯನ್ನೂ ಮೀರಿಸುವಂತೆ volumeನ್ನು ಗರಿಷ್ಠ ಮಟ್ಟಕ್ಕೆ ಏರಿಸಿ.

6. ಗಂಡ/ಹೆಂಡತಿಯನ್ನು ನೋಡಿದ ಕೂಡಲೇ ಮೈ ನಡುಕ ಪ್ರಾರಂಭವಾಗುವುದೇ?

6. ಕೂಡಲೇ ಹೋಗಿ ಒಂದು ಬಕೀಟ್ ತಣ್ಣೀರನ್ನು ಬಚ್ಚಲಿಗೆ ಸುರಿದು, ಕೋಣೆಗೆ ಬಂದು ಬೆಚ್ಚಗೆ ಮಲಗಿಬಿಡಿ.

7. ನಿಮ್ಮ ಅರ್ಧಾಂಗಿ, ತಾರಸ್ಥಾಯಿಯಲ್ಲಿ ಬಯ್ಯಲು ಪ್ರಾರಂಭಿಸಿದಾಗ, ಅಕ್ಕಪಕ್ಕದವರು ಕಿಟಕಿಯ ಮರೆಯಲ್ಲಿ ನಿಂತು ನೋಡುವುದನ್ನು ಕಂಡು ನೀವು ಮಾನಸಿಕ ವೇದನೆಗೊಳಗಾಗುವಿರಾ?

7. ಎರಡು ದಪ್ಪ ದಪ್ಪ ಹತ್ತಿ ಉಂಡೆಗಳನ್ನು ನಿಮ್ಮ ಕಿವಿಗಳಲ್ಲಿಟ್ಟು ಕೊಂಡು ಸಾಧ್ಯವಾದರೆ, ನಿಮ್ಮ ಅರ್ಧಾಂಗಿಯ ಬಾಯಲ್ಲಿ ಒಂದು ಗೋಂದು ಉಂಡೆಯನ್ನು ಹಾಕಿಬಿಡಿ.

8. ಮನೆಯಲ್ಲಿ ನಿಮಗೆ ತನ್ನಲು ಸಿಹಿ, ಎಣ್ಣೆ ತಿಂಡಿಗಳನ್ನು ಕೊಡುವುದಿಲ್ಲ ಎಂದಾಗ ರೇಗಾಡಿ, ಕೂಗಾಡಿ ಹೊಡೆದಾಟದ ಕಡೆಗೆ ತಿರುಗಬೇಕೆನಿಸಿದೆಯೆ?

8. ತಕ್ಷಣ ಮನೆಬಿಟ್ಟು ಒಂದರ್ಧ ಘಂಟೆ ಆರಾಮವಾಗಿ walk ಮಾಡಿ, ದಾರಿಯಲ್ಲಿ ಮಸಾಲಪುರಿ, ಗೋಬಿ ಮಂಚೂರಿ, ಒಂದೊಂದು plate ಮುಗಿಸಿ ಸದ್ದಿಲ್ಲದೆ ಮನೆ ಬಂದು ಸೇರಿ.

9. ಕಣ್ಣಲ್ಲಿ ಯಾವಾಗಲೂ ನೀರು ಸೋರುತ್ತಿರುವುದೇ? (ಯಾವಾಗಲೂ ಕಣ್ಣೀರು ಸುರಿಸುತ್ತಿರುವಿರಾ?)

9. ಕೈಯಲ್ಲೊಂದು ಚಾಕು, ಈರುಳ್ಳಿ ಇಟ್ಟುಕೊಂಡುಬಿಡಿ. ಆಗ ನೋಡಿದವರೆಲ್ಲರೂ ನಿಮ್ಮ ಕಣ್ಣೀರಿಗೆ ಕಾರಣವನ್ನು ನಿಮ್ಮನ್ನು ಕೇಳದೆಯೇ ತಿಳಿಯುತ್ತಾರೆ.

10. ನಿಮಗೆ ಬೆಳಿಗ್ಗೆ ಒಂಬತ್ತು ಗಂಟೆಗೇ ಅಥವಾ ಪರೀಕ್ಷೆಗೆ ಓದುತ್ತಿರುವಾಗ ನಿದ್ದೆ ಬರುತ್ತದೆಯೇ?

10. ಅಪರಂಜಿಯನ್ನು ಕರೆದು ನಿಮ್ಮ ಕೈಯಲ್ಲಿ ಹಿಡಿದುಕೊಳ್ಳಿ ನಿದ್ದೆ ಮಂಗಮಾಯಾ.



ಶ್ರೀಮತಿ ಶಾಂತಾ ಮತ್ತು ಶ್ರೀ ಸಿ. ಆರ್. ರಘು

ಇವರ ಸವಿನೆನಪಿಗೆ

ಪೂರ್ಣಿಮಾ ರಘು ಗೌಡ – ಸುಧೀರ್‌ಗೌಡ

ಶ್ರೀಹರಿ ಕದಾಂಬಿ.

Printed by V.R. NATH for the Publisher M. SHIVAKUMAR, Published and owned by M. SHIVA KUMAR, 36, 6th Main Road, Malleswaram Bangalore - 560 003. Printed at RAVI GRAPHICS, 62, 4th Cross, SSI Area, Rajajinagar, Bangalore 560 010.
Editor : M. SHIVAKUMAR